ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 13 ಮಾರ್ಚ್ 29, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರಾಷ್ಟ್ರದ ರಾಜಕಾರಣಕ್ಕೆ ಹೊಸ ತಿರುವು

ಕೇರಳ ಪ. ಬಂಗಾಳದ ಮಹತ್ತರ ವಿಜಯಗಳು

ಮುಂದೆ ದೇಶದ ರಾಜಕೀಯದಲ್ಲಿ ವಿಕಾರಗಳು ಮೂಡುತ್ತವೆ – ಕಾ|| ಜ್ಯೋತಿಬಸು


ರಾಷ್ಟ್ರದ ಜೀವನದಲ್ಲಿ ಮಾರ್ಕ್ಸಿಸ್ಟರ ಪಾತ್ರವನ್ನು ಗುರ್ತಿಸುವುದರಲ್ಲಿ ಕಾಂಗ್ರೈ ಮುಂಖಡತ್ವ ವಿಫಲಗೊಂಡಿದ್ದರೂ ಕೂಡ, ಮುಂಬರುವ ವರ್ಷಗಳಲ್ಲಿ ಎಡರಂಗ ದೇಶದಲ್ಲಿ ಮಹತ್ವದ ಪಾತ್ರವಹಿಸಬೇಕಾಗಿದೆಂದೂ ಮೂರನೇ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಜ್ಯೋತಿಬಸು ತಿಳಿಸಿದ್ದಾರೆ.

ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿಎಲ್ಲ ವಿರೋಧಪಕ್ಷಗಳೂ ರಾಷ್ಟ್ರಮಟ್ಟದಲ್ಲಿಒಟ್ಟಿಗೆಬರುವುದು ಅಗತ್ಯ, ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಸೋತಿರುವುದರಿಂದ ಮುಂದಿನ ಕೆಲವು ತಿಂಗಳುಗಳಲ್ಲೇ, ದೇಶದ ರಾಜಕೀಯದಲ್ಲಿ "ಕೆಲವು ವಿಕೃತಿ ಗಳು ಬರಬಹುದಾಗಿದೆ. ಕಾರ್ಯಕ್ರಮದ ಆಧಾರದಲ್ಲಿಬಂದಾಗುವ ವಿರೋಧ ಪಕ್ಷಗಳ ಐಕ್ಯತೆಯಿಂದ ಮಾತ್ರಅಂಥ "ವಿಕೃತಿಗಳನ್ನು" ಎದುರಿಸಲು ಸಾಧ್ಯ.

ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡು, ಕಾರ್ಯಕ್ರಮದ ತಳಹದಿಯಲ್ಲಿ ಕೆಲಸ ಮಾಡಲು ಇಚ್ಚಿಸುವ "ಜಾತ್ಯಾತೀತ" ವಿರೋಧ ಪಕ್ಷಗಳೆಲ್ಲ ಒಟ್ಟಿಗೆ ಸೇರುವುದು ಆಗತ್ಯ. ವಿರೋಧ ಪಕ್ಷಗಳ ಅಂಥರಾಷ್ಟ್ರೀಯ ಐಕ್ಯರಂಗದಲ್ಲಿ ಪ್ರಾದೇಶಿಕಪಕ್ಷಗಳಿಗೂ ಮಹತ್ವದ ಪಾತ್ರ ವಿದೆಂದು ಜ್ಯೋತಿ ಬಸು ಹೇಳಿದ್ದಾರೆ.

ಪಶ್ಚಿಮ ಬಂಗಾಲ, ಕೇರಳಗಳಲ್ಲಿ ಕಾಂಗ್ರೈ ಸೋಲು ಆದನ್ನು ಒಂದು ಪ್ರಾದೇಶಿಕ ಮಟ್ಟಕ್ಕೆ ಇಳಿಸಿದೆಂದು ಹೇಳುವುದು ಸರಿಯಲ್ಲೆಂದೂ ಅಭಿಪ್ರಾಯಪಟ್ಟರು. ಹಾಗೆ ಹೇಳುವುದು ಅಪಾಯಕಾರಿಯಾದೀತೆಂದು ಸಂಸತ್ತಿಲ್ಲಿ ವಿರೋಧ ಪಕ್ಷಗಳ ನಾಯಕರು ನೀಡಿದ ಪತ್ರಿಕಾ ಹೇಳಿಕೆಯ ಬಗ್ಗೆ ಎಚ್ಚರಿಸಿದರು.

ಸಾರ್ವಜನಿಕ ಜೀವನದಲ್ಲಿರುವವರ ಕುರಿತು ಕಾಂಗ್ರೈ ಮುಖಂಡರಿಗೆ "ಸದಾಚಾರ"ವೇ ಇಲ್ಲದುದಕ್ಕೆ ದುಃಖ ವ್ಯಕ್ತಮಾಡಿದರು. ಕಾಂಗ್ರೈಯ ಉಚ್ಚ ಮುಖಂಡತ್ವ ಉಪಯೋಗಿಸಿದ ಅತ್ಯಂತ ಕೀಳ್ಮಟ್ಟದ ವಿಷ ಪೂರಿತ ಪ್ರಚಾರ "ವರ್ಣಿಸಲಾರದ ರೀತಿಯಲ್ಲಿ ತನಗೆ ನೋವುಂಟು ಮಾಡಿದೆಂದೂ, ತನ್ನ ಸುದೀರ್ಘ ಸಾರ್ವಜನಿಕ ಜೀವನದಲ್ಲಿ ತಾನು ಅಂಥವುಗಳನ್ನು ಎದುರಿಸಬೇಕಾಗಿ ಬಂದಿರಲಿಲ್ಲವೆಂದು ಹೇಳಿದರು ●



ಚುನಾವಣೆಯಿಂದ ಚುನಾವಣೆಗೆ ಬೆಳೆಯುತ್ತಿರುವ ಎಡರಂಗ–ಕುಗ್ಗುತ್ತಿರುವ ಕಾಂಗ್ರೈ	1977	1982	1987
ಸಿ.ಪಿ.ಐ. (ಎಂ)	178	174	187
ಫಾರ್ವರ್ಡ್‌ಬ್ಲಾಕ್	25	28	26
ಆರ್.ಎಸ್.ಪಿ.	20	19	18
ಸಿ.ಪಿ.ಐ.	2	7	11
ಆರ್.ಸಿ.ಪಿ.ಐ. ✗			1
ಡಿ.ಎಸ್.ಪಿ. ✗	6	10	2
ಡಬ್ಲ್ಯ್ಯು ಬಿ.ಎಸ್.ಪಿ. ✗			4
ಫಾರ್ವರ್ಡ್‌ಬ್ಲಾಕ್ [ಮಾ] ✗			2
ಎಡರಂಗ ಒಟ್ಟು	231	238	251
ಕಾಂಗ್ರೆಸ್ [ಐ]	20	49	40
ಜನತಾ	29	–	–
ಇತರರು	14	3	3
ಒಟ್ಟು	294	294	294

50 ಸಾವಿರ ಸಹಿಗಳ ಮನವಿ ಅರ್ಪಣೆ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಮಂಡಳಿಯ ನಿರ್ಣಯದಂತೆ, ಹೆಗಡೆ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸುವ ಮನವಿಯಲ್ಲಿ ರಾಜ್ಯಾದ್ಯಂತ ಸಹಿ ಸಂಗ್ರಹ ನಡೆಸಲಾಗಿತ್ತು. ಅರ್ಧ ಲಕ್ಷಕ್ಕೂ ಮೇಲ್ಪಟ್ಟು ಸಹಿಗಳನ್ನೊಳಗೊಂಡ ಮನವಿಯನ್ನು ಮಾರ್ಚ್ 26 ರಂದು ವಿಧಾನ ಸಭೆಯ ಸ್ಪೀಕರರಾದ ಬಣಕಾರ ಅವರಿಗೆ ಅರ್ಪಿಸಲಾಯಿತು. ಶಾಸಕರಾದ ಆರ್. ವೆಂಕಟರಾಮಯ್ಯ, ಟಿ.ಎಸ್.ಮಣಿ,ಸಿ ಐ.ಟಿ.ಯು ಅಧ್ಯಕ್ಷ ಸೂರ್ಯನಾರಾಯಣ್‌ರಾವ್, ಕಾರ್ಯದರ್ಶಿ ಸಿ. ನಂಜುಂಡಪ್ಪ ಮತ್ತು ಎಂ. ಕೆ. ರಮೇಶ ಅವರು ಸ್ಪೀಕರ್ ಅವರಿಗೆ ಸಹಿಗಳನ್ನೊಳಗೊಂಡ ಮನವಿಯನ್ನರ್ಪಿಸಿದರು.

ಆದಕ್ಕೆ ಪೂರ್ವ ಭಾವಿಯಾಗಿ, ನೂರಾರು ಕಾರ್ಮಿಕರು ಚಿಕ್ಕಲಾಲ್ ಬಾಗಿನಿಂದ ಮೆರವಣಿಗೆಯಲ್ಲಿ ಕಬ್ಬನ್ ಪಾರ್ಕಿಗೆ ಹೋಗಿ ಧರಣಿ ಕೂತಿದ್ದರು. ರಾಜ್ಯದ ಇತರ ಕಡೆಗಳಲ್ಲಿಯೂ ಕಾರ್ಮಿಕ ಇಲಾಖೆಗಳ ಮುಂದೆ ಧರಣಿ ನಡೆಸಲಾಯಿತು. ○

ಅಲ್ಪಸಂಖ್ಯಾತ ಮತೀಯವಾದದ ವಿರುದ್ಧ ಹೋರಾಟ ಇಲ್ಲಿಗೇ ಮುಗಿಯಲಿಲ್ಲ, – ಕಾ|| ಇ. ಎಂ. ಎಸ್.

ಕೇರಳದ ಎಡ ಪ್ರಜಾಪ್ರಭುತ್ವ ರಂಗದ ವಿಜಯ ಜಾತ್ಯಾತೀತ ಶಕ್ತಿಗಳಿಗೆ "ದೊಡ್ಡ ವಿಜಯ" ಎಂದು ವರ್ಣಿಸಿದರು ಕಾಂ. ಇ.ಎಂ.ಎಸ್. ನಂಬೂದರಿ ಪಾದ್‌ರವರು. ಆ ದ ರೆ ಆದರ ಹಿಂದೆಯೇಎಚ್ಚರಿಕೆ ಅಡಗಿತ್ತು. ಎಡ ಪ್ರಜಾಪ್ರಭುತ್ವರಂಗದ ವಿಜಯ ಅಲ್ಪ ಸಂಖ್ಯಾಕರ ಮತೀಯತೆಯ ವಿರುದ್ಧ ಹೋರಾಟದಲ್ಲಿ ಪೂರ್ಣ ಜಯಗಳಿಸಿದೆ ಎಂದು ಭಾವಿಸಲಾಗದು ಆದರೆ ಎಡ ಪ್ರಜಾಪ್ರಭುತ್ವರಂಗದ ವಿಜಯ ಬಹುಸಂಖ್ಯಾ, ಹಾಗೂ ಅಲ್ಪ ಸಂಖ್ಯಾಕರೆಂಬ ಎರಡೂ ಗುಂಪುಗಳ ಮತೀಯವಾದವನ್ನು ಪರಿಣಾಮಕಾರಿಯಾಗಿ ಎದುರಿಸ ಬಹುದು ಎಂಬುದರ ಸೂಚನೆ ಎಂದರು.

ಎಲ್.ಡಿ. ಎಫ್.ರಂಗವು ಕೇವಲ ಬಹುಸಂಖ್ಯಾ ಕೋಮಿನವರ ಬೆಂಬಲ ದಿಂದ ಗೆದ್ದಿದೆ ಎಂಬ ಮಾಜಿ ಮುಖ್ಯಮಂತ್ರಿ ಕೆ.ಕರುಣಾಕರನ್‌ರವರ ಅಪಾದನೆ ನಿರಾಧಾರ. ಹೀಗೆ ಅಲ್ಪ ಸಂಖ್ಯಾತರನ್ನು ಬಹುಸಂಖ್ಯಾತರ ವಿರುದ್ಧ ಎತ್ತಿಕಟ್ಟುವ ಪ್ರವೃತ್ತಿ ಬದಲಾಗಬೇಕು. ಇಲ್ಲದಿದ್ದರೆ ದೇಶಕ್ಕೆ ಭಾರಿ ಅಪಾಯ ಕಾದಿದೆ. ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿಕಟ್ಟುವುದರಿಂದ ಯಾವ ಪಕ್ಷವೂ ದೇಶಕ್ಕೆ ಒಳಿಯದು ಮಾಡಲು ಸಾಧ್ಯವಿಲ್ಲ. ಇಂತಹ ಪ್ರವೃತ್ತಿ ಈಗ ಕಾಂಗ್ರೈ ಅನುಭವಿಸಿದ ಸೋಲಿನಲ್ಲಿ ಮಾತ್ರ ಕೊನೆಗಾಣಲು ಸಾಧ್ಯ. ಮುಸ್ಲಿಂ ಲೀಗ್ ಅತಿ ಅಪಾಯಕಾರಿ ಪಥವನ್ನು ತುಳಿಯುತ್ತಿದೆ. "ಮುಸ್ಲಿಂ ಮತ ಬ್ಯಾಂಕ್" ಸೃಷ್ಟಿಸುವುದಕ್ಕೆ ಪ್ರತಿಸ್ಪಂದಿಯಾಗಿ ಹಿಂದೂ ಮತ ಬ್ಯಾಂಕ್ ಸೃಷ್ಟಿಯಾಗುತ್ತಿದೆ. ಕಾಂಗ್ರೆಸ್ ಪಕ್ಷವು 1959 ರಲ್ಲಿ ಕೋಮು ಪಕ್ಷಗಳೊಡನೆ ಆರಂಭಿ

(8ನೇ ಪುಟ ನೋಡಿ)

ಅಭಿನಂದನೆಗಳು

ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ-ಶಕ್ತಿಗಳಿಗೆ ಅದ್ಭುತ ವಿಜಯ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಲಸಂವರ್ಧನೆ. ಪ್ರತಿಗಾಮಿ, ಛಿದ್ರಕಾರಿ, ಜಾತೀಯ – ಮತೀಯ – ಮೂಲಭೂತವಾದಿಗಳಿಗೆ ಅಪಾರ ಸೋಲು. ರಾಜೀವ ಗಾಂಧಿಯವರಿಂದ ಅತಿ ಕೀಳ್ಮಟ್ಟದ, ವಿಷಪೂರಿತ, ಅಸಹ್ಯಕರವಾದ ಚುನಾವಣಾ ಪ್ರಚಾರ. ಅಂಥ ಸುಳ್ಳು ಅಪಪ್ರಚಾರಗಳಿಗೆ ಬಲಿಯಾಗದೆ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಮತಹಾಕಿ ಪ್ರಚಂಡ ಗೆಲುವು ತಂದ ಕೇರಳ–ಪ.ಬಂಗಾಳ ಜನತೆಗೆ ಕರ್ನಾಟಕದ ಜನತೆ ಅಪಾರ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಪಶ್ಚಿಮ ಬಂಗಾಲದಲ್ಲಿ ಹತ್ತು ವರ್ಷ ಆಡಳಿತ ನಡೆಸಿದ ವಾಮರಂಗವನ್ನು ಅಧಿಕಾರದಿಂದ ಕೆಳಗಿಳಿಸುವ ದುರುದ್ದೇಶದಿಂದ ರಾಜೀವ್ ಗಾಂಧಿಯವರು ಸಿ.ಪಿ.ಐ.[ಎಂ]ಮೇಲೆ ವಿಷ ಕಾರುತ್ತ,ಅವರು ಪಶ್ಚಿಮ ಬಂಗಾಳವನ್ನು ಸರ್ವನಾಶ ಮಾಡಿದಾರೆಂದೂ, ಆದ್ದರಿಂದ ನೂತನ ಬಂಗಾಳ ನಿರ್ಮಾಣಕ್ಕೆ ಅಲ್ಲಿಯ ಕೆಂಪುಕೋಟೆಯನ್ನು ನಾಶಗೊಳಿಸಬೇಕೆಂದೂ ಕರೆ ನೀಡಿದರು. ಆದರೆ ಪ್ರಜ್ಞಾವಂತರಾದ ಪಶ್ಚಿಮ ಬಂಗಾಳದ ಮತದಾರರು ರಾಜೀವ್ ಗಾಂಧಿಯವರಿಗೆ ಸಮರ್ಪಕ ಉತ್ತರ ನೀಡಿದ್ದಾರೆ. 294 ಸದಸ್ಯರ ವಿಧಾನ ಸಭೆಯಲ್ಲಿ ಮುಕ್ಕಾಲು ಭಾಗದಷ್ಟು ಹೆಚ್ಚುಮತ ವಾಮರಂಗಕ್ಕೆ ದೊರಕಿಸಿದ್ದಾರೆ. ಹಿಂದಿನ ಸಲ ವಾಮರಂಗ 238 ಸ್ಥಾನ ಗೆದ್ದಿತ್ತು. ಈಗ 251 ಸ್ಥಾನ ಪಡೆದಿದೆ. ಹಿಂದಿನ ಸಲ 49 ಸ್ಥಾನ ಪಡೆದಿದ್ದ ಕಾಂಗ್ರೈ ಈ ಸಲ 40 ಸ್ಥಾನ ಮಾತ್ರ ಪಡೆದಿದೆ.

(8ನೇ ಪುಟ ನೋಡಿ)

ಶೌರ್ಯ, ಸಾಹಸ ಮತ್ತು ತ್ಯಾಗದ ಪ್ರತಿಮೂರ್ತಿ ಭಗತ್‌ಸಿಂಗ್

ಕ್ರಿಸ್ತಶಕ ಇಪ್ಪತ್ತನೇ ಶತಮಾನದ ಮೂರನೇ ದಶಕ ಭಾರತೀಯ ಕ್ರಾಂತಿಕಾರಿ ಸಿದ್ಧಾಂತಗಳಲ್ಲಿ ಮಹತ್ವದ ಪರಿವರ್ತನೆಗಳಾದ ಕಾಲ. ವಿದೇಶಿ ಆಳರಸರ ವಿರುದ್ಧ ಅವರದ್ವೇಷ ಮತ್ತು ಆಕ್ರೋಶಗಳು ಸಾಮಾಜಿಕ ಶಕ್ತಿಗಳ ಬಗೆಗಿನ ನಿಖರವಾದ ತಿಳುವಳಿಕೆ ಮತ್ತು ಸಾಮಾಜಿಕ ಕ್ರಾಂತಿಯಲ್ಲಿ ತುಳಿತಕ್ಕೊಳಗಾದ ಜನಸಮುದಾಯ ನಿರ್ವಹಿಸಬೇಕಾದ ಪಾತ್ರದ ಬಗೆಗಿನ ಅರಿವಿನ ಜೊತೆಗೆ ಮುಪ್ಪುರಿಗೊಂಡ ಮಹತ್ವದ ಕಾಲಘಟ್ಟ ಅದು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮುಂದಾಳುಗಳು ರಾಷ್ಟ್ರಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬೇಕೆಂಬ ಬೇಡಿಕೆಯನ್ನು ಇನ್ನೂ ಒಪ್ಪಿಕೊಂಡಿರದಿದ್ದ ಆಕಾಲದಲ್ಲಿ ಈ ಯುವ ಕ್ರಾಂತಿಕಾರಿಗಳು ಸಾಮ್ರಾಜ್ಯಶಾಹಿಯನ್ನು ಖಂಡತುಂಡವಾಗಿ ವಿರೋಧಿಸಿ ರಾಷ್ಟ್ರಕ್ಕೆ ಪೂರ್ಣ ಸ್ವಾತಂತ್ರ್ಯ ಬೇಕೆಂಬ ಬೇಡಿಕೆ ಮುಂದೊಡ್ಡಿದರು. ಜಾತಿ, ಮತ ಭೇದಗಳನ್ನು ಕಂಡು ಅಸಹ್ಯಗೊಂಡ ಈ ಕ್ರಾಂತಿಕಾರಿಗಳು ಹಳೆಯ ಧಾರ್ಮಿಕ ಮತ್ತು ಸಾಂಪ್ರದಾಯಿಕ ಮೌಲ್ಯಗಳನ್ನು ತಿರಸ್ಕರಿಸಿ ಆಧುನಿಕ ವಿಚಾರಗಳಿಗೆ ತಮ್ಮನ್ನು ತೆರೆದುಕೊಂಡರು. ದೈವವನ್ನು ನಂಬಿ ಕುಳಿತುಕೊಳ್ಳುವಂತಹ ಗೊಡ್ಡು ವಿಚಾರಗಳು ತೊಲಗಿ ಜಾತ್ಯತೀತ ಮನೋಭಾವ ಕ್ರಾಂತಿಕಾರಿಗಳನ್ನು ಆಕರ್ಷಿಸಿತು. ಹಳೆಯ ಕಂದಾಚಾರಗಳು ತಿರಸ್ಕರಿಸಲ್ಪಟ್ಟು ಪ್ರಜಾಸತ್ತೆ, ಸಾಮಾಜಿಕ ವ್ಯವಸ್ಥೆ ಇತ್ಯಾದಿ ವಿಚಾರಗಳು ಬೆಳೆದುಬಂದವು. ದೇಶದ ಸ್ವಾತಂತ್ರ್ಯವೆಂದರೆ ಬರಿಯ ಬ್ರಿಟಿಷರ ಆಳ್ವಿಕೆಯಿಂದ ವಿಮೋಚನೆ ಮಾತ್ರ ಅಲ್ಲ, ಬದಲು ಸ್ವಾತಂತ್ರ್ಯ ಪ್ರಜಾಸತ್ತೆ ಮತ್ತು ಮಾನವನಿಂದ ಮಾನವನ ಶೋಷಣೆಯನ್ನು ಕೊನೆಗಾಣಿಸುವುದೆಂಬ ಸಿದ್ಧಾಂತ ಕ್ರಾಂತಿಕಾರಿಗಳ ಪ್ರಣಾಳಿಕೆಯಾಯಿತು., ಆದರೆ ಸೈದ್ಧಾಂತಿಕವಾಗಿ ಪ್ರಬುದ್ಧನಾಗುತ್ತಿದ್ದ ಕ್ರಾಂತಿಕಾರಿಗಳ ಚಳುವಳಿಗಳಲ್ಲೂ ತಕ್ಷಣದ ಶೌರ್ಯ ಸಾಹಸಗಳು ಮತ್ತು ಸ್ವಾತಂತ್ರ್ಯಕ್ಕಾಗಿ ಆತ್ಮಬಲಿದಾನ ಮಾಡುವ ಪ್ರವೃತ್ತಿಯಕಡೆಗಿನ ಒಲವು ಇನ್ನೂ ಮಾಸಿರಲಿಲ್ಲ. ಹಾಗಾಗಿ ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳು ನಡೆಸಿದ ಅಪೂರ್ವ ಸಹಾಸ, ಶೌರ್ಯ ಮತ್ತು ಬಲಿದಾನಗಳ ಗಾಥೆ ಜನಜನಿತವಾಗಿರುವಷ್ಟು ಅವರ ಸೈದ್ಧಾಂತಿಕ ಪ್ರಖರತೆ ಮತ್ತು ಪ್ರಬುದ್ಧತೆಗಳು ಪ್ರಚಾರವಾಗಿಲ್ಲ.

ಭಗತ್‌ಸಿಂಗ್ ಮತ್ತು ಆತನ ಅನುಚರರ ಹೆಸರು ಭಾರತೀಯ ಜನತೆಯ ಹೃದಯದಲ್ಲಿ ಸದಾ ಹಸಿರು. ಆಕಾಲದ ಕ್ರಾಂತಿಕಾರಿಗಳಲ್ಲಿ ಯಾರೂ ಭಗತ್‌ಸಿಂಗ್‌ನಷ್ಟು ಸಹಾನುಭೂತಿ, ಜನಪ್ರಿಯತೆ ಮತ್ತು ಸೌಹಾರ್ದತೆಯ ಭಾವನೆಗಳನ್ನು ಜನಮನದಲ್ಲಿ ಕೆರಳಿಸಿರಲಿಲ್ಲ, ಭಗತ್‌ಸಿಂಗ್ ಜನತೆಯ ಪ್ರಜ್ಞೆ, ಆಶೋತ್ತರಗಳು ಮತ್ತು ಗುಲಾಮಗಿರಿಯ ವಿರುದ್ಧ ಹೋರಾಡುವ ಅದಮ್ಯ ಛಲದ ಭಾಗವಾಗಿದ್ದ, ಲಾಹೋರ್ ಪಿತೂರಿಯ ವಿಚಾರಣೆ 1929ರಲ್ಲಿ ನಡೆಯುತ್ತಿದ್ದಾಗಿನ ದಿನಗಳವು. ಸಾಮ್ರಾಜ್ಯಶಾಹಿಯ ನ್ಯಾಯಾಲಯದ ಕಟಕಟೆಯಲ್ಲಿ ಸಾಮ್ರಾಜ್ಯಶಾಹಿಯನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಭಾರತದ ಪ್ರತಿಷ್ಟೆ ಮತ್ತು ಆತ್ಮಗೌರವವನ್ನು ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಎತ್ತಿಹಿಡಿದ ಆ ಮಹಾನ್ ದಿನಗಳಲ್ಲಿ ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳ ಈ ಧೀರೋದಾತ್ತ ಹೋರಾಟಕ್ಕೆ ಸ್ಪಂದಿಸಿದ ಜನ ಕೋಟಿ ಅಸಂಖ್ಯ ರೈತರು, ಕಾರ್ಮಿಕರು, ಎಲ್ಲ ಜನ ವಿಭಾಗಗಳು ಬಡವ, ಬಲ್ಲಿದ, ಹೆಚ್ಚೇಕೆ ರಾಜಕೀಯವಾಗಿ ನಿಷ್ಕ್ರಿಯರಾಗಿ ಜನರೂ ಭಗತ್‌ಸಿಂಗ್‌ರ ಈ ಶೌರ್ಯ ಸಾಹಸದಿಂದ ಪ್ರಭಾವಿತರಾಗದಿರಲು ಸಾಧ್ಯವಿರಲಿಲ್ಲ.

ಭಗತ್‌ಸಿಂಗ್, ಸುಖದೇವ್, ರಾಜಗುರು ಎಂಬ ಮೂರು ಜನ ಪಂಜಾಬಿನ ಕ್ರಾಂತಿಕಾರಿಗಳನ್ನು 1931 ರಂದು ಮಾರ್ಚ್ 23 ರಂದು ನೇಣುಗಂಬಕ್ಕೆ ಹಾಕಿ 56 ವರ್ಷಗಳು ಕಳೆದಿವೆ.

ಕಾ|| ಬಿ. ಟಿ. ಆರ್‌ರವರು ಈ ಅಪ್ರತಿಮ ಕ್ರಾಂತಿಕಾರಿಗಳು ಜಗತ್ತನ್ನೇ ಬದಲಾಯಿಸಿದ ಕ್ರಾಂತಿಕಾರಿ ಸಿದ್ಧಾಂತ ಮಾರ್ಕ್ಸ್‌ವಾದಕ್ಕೆ ಒಲಿದ ಬಗೆಯನ್ನು ವಿವರಿಸುತ್ತಾರೆ

ಆಧಾರ : Selected Writings of Bhagat Singh
ಎನ್. ಬಿ. ಸಿ. ಪ್ರಕಾಶನ, ನವದೆಹಲಿ
ಸಂಗ್ರಹ : ಕಾ|| ಎ. ಎಸ್. ಆಚಾರ್ಯ

"ನಾನು ಭಯೋತ್ಪಾದಕ ಅಲ್ಲ"

ಮೊಂಟೆಗ್ಯೂ ಜೇಮ್ಸ್‌ಫರ್ಡ್ ಸುಧಾರಣೆಯ ಫಲವಾಗಿ ಬ್ರಿಟಿಷ್ ಆಳರಸರು ಭಾರತದಲ್ಲಿ ಕೇಂದ್ರ ವಿಧಾನ ಸಭೆ (ಸೆಂಟ್ರಲ್ ಅಸೆಂಬ್ಲಿ)ಯನ್ನು ಸ್ಥಾಪಿಸಿದರು. ಭಾರತವು ಪ್ರಜಾಸತ್ತಾತ್ಮಕವಾಗಿಯೇ ಆಳಲ್ಪಡುತ್ತಿದೆಯೆನ್ನುವುದನ್ನು ಹೊರ ಜಗತ್ತಿಗೆ ತೋರಿಸಿಕೊಡುವುದು ಈ ಕುಹಕದ ಉದ್ದೇಶ. ಸಾಮ್ರಾಜ್ಯಶಾಹಿಯ ಈ ಬೂಟಾಟಿಕೆಗೆ ಭಗತ್‌ಸಿಂಗ್ ಮತ್ತು ಅವನ ಅನುಚರರು ಮುಷ್ಟಿ ಪ್ರಹಾರ ಮಾಡಬಯಸಿದರು. ಕೇಂದ್ರ ವಿಧಾನ ಸಭೆ ಬ್ರಿಟಿಷ್ ಗುಲಾಮಗಿರಿಯ ಸ್ಮಾರಕವೆನ್ನುವುದನ್ನು ತೋರಿಸಿಕೊಡುವುದು ಅವರ ಉದ್ದೇಶ. ಭಗತ್‌ಸಿಂಗ್, ಮತ್ತು ಬಟುಕೇಶ್ವರ ದ' ದಹಲಿಯ ಕೇಂದ್ರ ವಿಧಾನ ಸಭೆಯ ಗ್ಯಾಲರಿಯಿಂದ ಬಾಂಬೊಂದನ್ನು ಎಸೆದರು. ಅದರ ಬೆನ್ನ ಹಿಂದೆ ಕೆಂಪು ಬಣ್ಣದ ಕರಪತ್ರಗಳನ್ನೆಸೆದು "ಕ್ರಾಂತಿ ಚಿರಾಯುವಾಗಲಿ" ಎಂಬ ಘೋಷಣೆ ಕೂಗಿದರು.

ಭಗತ್‌ಸಿಂಗ್ ಸ್ವತಃ ಹೇಳಿರುವಂತೆ ಬಾಂಬ್ ಎಸೆಯುವುದರ ಉದ್ದೇಶ ಯಾರನ್ನೂ ಕೊಲ್ಲುವುದಲ್ಲ, ಬಾಂಬ್ ಆಸ್ಫೋಟದಿಂದ ಕೆಲವೇ ಬ್ರಿಟಿಷ್ ಸರ್ಕಾರದ ಅಧಿಕಾರಿಗಳಿಗೆ ಸಣ್ಣ ಪುಟ್ಟ ಗಾಯಗಳಾದದ್ದು ಬಿಟ್ಟರೆ ಬೇರಾವ ಹಾನಿಯೂ ಆಗಿರಲಿಲ್ಲ. ಸಾಮ್ರಾಜ್ಯಶಾಹಿ ಆಳರಸರ ನಯವಂಚಕತನವನ್ನು ತಮ್ಮ ವೈಯುಕ್ತಿಕ ಶೌರ್ಯದ ಮೂಲಕ ಬಯಲಿಗೆಳೆದು, ಜನಕೋಟಿಯ ಸಹಾನುಭೂತಿ ಮತ್ತು ಅವರ ಸ್ವಾತಂತ್ರ್ಯದ ತುಡಿತವನ್ನು ಉದ್ದೀಪನಗೊಳಿಸುವುದೇ ಅವರ ಆಶಯವಾಗಿತ್ತು.

ಕ್ರಾಂತಿಕಾರಿಯೊಬ್ಬ ಬರಿಯ ಘೋಷಣೆಗಳ ಆಸಕ್ತಿಯಲ್ಲೇ ಬದುಕಿರಲಾರ ಅಪಾರಧೈರ್ಯ, ಸಾವನ್ನೂ ಸ್ವಾಗತಿಸುವ ಚೈತನ್ಯ ಎಲ್ಲವನ್ನೂ ಬಲಿದಾನ ಮಾಡುವ ಮನೋಭಾವ ಮತ್ತು ಎಂತಹ ಚಿತ್ರಹಿಂಸೆಯಲ್ಲೂ ಸ್ಥೈರ್ಯ ಕಳೆದುಕೊಳ್ಳದಂತಹ ಗುಣಗಳನ್ನು ರೂಢಿಸಿಕೊಳ್ಳದಿದ್ದರೆ ಕ್ರಾಂತಿಯ ಮಾತು ಅರ್ಥಹೀನ, ಕ್ರಾಂತಿಕಾರಿಗಳು ವೈಯುಕ್ತಿಕವಾಗಿ ಶೂರರಾಗದಿದ್ದರೆ, ತಮ್ಮ ತ್ಯಾಗ ಬಲಿದಾನಗಳಿಂದ ಜನತೆಯನ್ನು ಉತ್ತೇಜಿಸದಿದ್ದರೆ ಮತ್ತು ಗಲ್ಲುಗಂಭವನ್ನಾಗಲೀ ಕೊಲೆಗಡುಕನ ಕೊಡಲಿಯನ್ನಾಗಲೀ ತಲೆಯೆತ್ತಿ ಎದುರಿಸದಿದ್ದರೆ ಯಾವ ಕ್ರಾಂತಿಯೂ ಫಲಕಾರಿಯಾಗಲಾರದು. ಭಗತ್‌ಸಿಂಗ್ ಹಾಕಿಕೊಟ್ಟ ಮೇಲ್ಪಂಕ್ತಿ ಇದೇ.

ಆದರೂ ಭಗತ್ ಸಿಂಗ್ ತಾನೇ ಹೇಳಿಕೊಂಡಂತೆ ಆತ ಭಯೋತ್ಪಾದಕ ಅಲ್ಲ. ಫೆಬ್ರುವರಿ2. 1931ರಲ್ಲಿ ಭಗತ್ ಸಿಂಗ್ 'ಯುವ ರಾಜಕೀಯ ಕಾರ್ಯಕರ್ತರಿಗೆ' ಬರೆದ ಪತ್ರವೊಂದರಲ್ಲಿ "ನಾನು ಭಯೋತ್ಪಾದಕನಂತೆ ವರ್ತಿಸಿರಬಹುದು, ಆದರೆ ನಾನೊಬ್ಬ ಭಯೋತ್ಪಾದಕ ಅಲ್ಲ. ನಾನೊಬ್ಬ ಕ್ರಾಂತಿಕಾರಿ ಮತ್ತು ನೀವಿಲ್ಲಿ ಚರ್ಚಿಸುವಂತಹ ದೀರ್ಘವಾದ ಕಾರ್ಯಕ್ರಮವೊಂದರ ಬಗ್ಗೆ ನನಗೆ ನಿರ್ದಿಷ್ಟವಾದ ತಿಳುವಳಿಕೆ ಇದೆ"ಎಂದಿದ್ದಾನೆ.ಅಷ್ಟೇ ಅಲ್ಲದೆ "ನನ್ನ ಸಂಗಾತಿಗಳಲ್ಲಿ ಕೆಲವರು,ಉದಾಹರಣೆಗೆ ರಾಮಪ್ರಸಾದ್ ಬಿಸ್ಮಿಲ್ ಅಂಥವರು ನನ್ನನ್ನು ಅಪಾರ್ಥ ಮಾಡಿಕೊಳ್ಳುವ ಸಾಧ್ಯತೆಯಿದೆ. ಜೇಲಿನಲ್ಲಿ ನಾನು ಮೆತ್ತಗಾಗಿದ್ದೇನೆಂದು ಅವರು ತಿಳಿದಿರಬಹುದು. ಆದರೆ ಇದು ಸುಳ್ಳು. ನಾನು ಜೇಲಿನಲ್ಲಿ ಹೊರಗಿದ್ದಾಗ ನನಗೆ ಯಾವ ವಿಚಾರ, ಪ್ರಜ್ಞೆ ಮತ್ತು ತಿಳುವಳಿಕೆಗಳು ಇದ್ದುವೋ ಅವು ಈಗಲೂ ನನ್ನಲ್ಲಿವೆ. ಬಹುಶಃ ಅವು ಇನ್ನೂ ಸ್ಪಷ್ಟವಾಗಿವೆ. ಆದುದರಿಂದಲೇ ನನ್ನ ಬರಹದಲ್ಲಿ ಇಲ್ಲದೇ ಇರುವುದನ್ನು ಓದುವುದರ ವಿರುದ್ಧ ಎಚ್ಚರಿಕೆ ನೀಡುತ್ತೇನೆ. ಈ ವಿಚಾರ ಸ್ಪಷ್ಟವಾಗಿರಲಿ. ನನ್ನ ಕ್ರಾಂತಿಕಾರಿ ಚಟುವಟಿಕೆಗೆಂದು ತೀರಾ ಆರಂಭದ ದಿನಗಳನ್ನು ಬಿಟ್ಟರೆ ಉಳಿದಂತೆ ನಾನು ಯಾವತ್ತೂ ಭಯೋತ್ಪಾದಕ ಆಗಿರಲಿಲ್ಲ. ಈ ಮಾರ್ಗದಿಂದ ನಾವೇನೂ ಸಾಧಿಸಲಾರೆವೆಂಬುದು ನನಗೆ ಮನವರಿಕೆಯಾಗಿದೆ. ಪಿಸ್ತೂಲು ಮತ್ತು ಬಾಂಬುಗಳು ನಿರುಪಯುಕ್ತವೆಂದು ಖಂಡಿತವಾಗಿಯೂ ನಾನು ಹೇಳುತ್ತಿಲ್ಲ. ಅವುಗಳ ಉಪಯೋಗ ಅಪಾರ ಆದರೆ ಕೇವಲ ಬಾಂಬೆಸೆತ ಮಾತ್ರದಿಂದ ಒಳಿತಿಗಿಂತ ಹೆಚ್ಚು ಹಾನಿಯಾಗಬಹುದು. ನಮ್ಮ ಪಕ್ಷದ ಶಸ್ತ್ರಾಸ್ತ್ರದ ವಿಭಾಗ ಯಾವುದೇ ತುರ್ತಿನ ಸಂದರ್ಭವನ್ನೆದುರಿಸಲು ಸಿದ್ಧವಾಗಿರಬೇಕು.ಆದರೆ ಅದು ಪಕ್ಷದ ರಾಜಕೀಯ ಚಟುವಟಿಕೆಗಳಿಗೆ ಬೆಂಬಲವಾಗಿರಬೇಕು ಸಶಸ್ತ್ರದಳ ಎಂದೂ ಸ್ವತಂತ್ರವಾಗಿ ಕಾರ್ಯನಿರ್ವಹಿಸಬಾರದು" ಎಂದಿದ್ದಾನೆ.

'ಮಾರ್ಕ್ಸ್‌ವಾದದ ಅಭ್ಯಾಸಿ;ಲೆನಿನ್ ಅಭಿಮಾನಿ'

ಭಗತ್ ಸಿಂಗ್ ಕೇಂದ್ರ ವಿಧಾನ ಸಭೆಗೆ ಎಸೆದ ಕೆಂಪು ಕರಪತ್ರ "ಕ್ರಾಂತಿ ಚಿರಾಯುವಾಗಲಿ" "ಕಾರ್ಮಿಕ ವರ್ಗದ ಸರ್ವಾಧಿಕಾರ ಚಿರಾಯುವಾಗಲಿ"ಎಂಬ ಘೋಷಣೆಗಳಲ್ಲಿ ಕೊನೆಗೊಂಡಿತು. ನಮ್ಮ ದಸ್ತಗಿರಿಯನಂತರ ಭಗತ್ ಸಿಂಗ್ ಮತ್ತು ಆತನ ಸಂಗಾತಿಗಳು ನೀಡಿದ ಹೇಳಿಕೆಯಲ್ಲಿ ತಾವು ಮೀರತ್ ಪಿತೂರಿ ಮೊಕದ್ದಮೆಗೆ ಸಂಬಂಧಿಸಿದಂತೆ ಕಮ್ಯುನಿಸ್ಟರನ್ನೂ ಇತರ ಕಾರ್ಮಿಕ ಮುಂದಾಳುಗಳನ್ನೂ ಸಾರಾಸಗಟಾಗಿ ದಸ್ತಗಿರಿ ಮಾಡಿರುವುದರ ವಿರುದ್ಧ ಪ್ರತಿಭಟಿಸಿ ಬಾಂಬೆಸೆದೆವು ಎಂದಿದ್ದಾರೆ. ಕೈಗಾರಿಕಾ ಕಾರ್ಮಿಕರ ಸಾರ್ವತ್ರಿಕ ಮುಷ್ಕರವನ್ನು ನಿಷೇಧಿಸುವ ಟ್ರೇಡ್ಸ್ ಡಿಸ್ಪ್ಯೂಟ್ಸ್ ಬಿಲ್‌ನ ವಿರುದ್ಧ ಪ್ರತಿಭಟಿಸಿದ್ದೇವೆಂದೂ ಹೇಳಿದ್ದಾರೆ. "ಸುಗ್ರೀವಾಜ್ಞೆ ಮತ್ತು ನಿಷೇಧ ಶಾಸನಗಳಿಂದ ನೀವು ಭಾರತೀಯ ಜನತೆಯ ಸ್ವಾತಂತ್ರ್ಯ ಹೋರಾಟದ ಜ್ವಾಲೆಯನ್ನು ಹತ್ತಿಕ್ಕಬಲ್ಲಿರಾ ? ಪಿತೂರಿ ಮೊಕದ್ದಮೆಗಳು, ಸುಳ್ಳು ಆಪಾದನೆ ಮೂಲಕ ಲಕ್ಷಾಂತರ ಯುವಕರನ್ನು ಜೇಲಿಗಟ್ಟಿದರೂ ನೀವು ಕ್ರಾಂತಿಯ ಮುನ್ನಡೆಯನ್ನು ತಡೆಗಟ್ಟಲಾರಿರಿ" ಎಂದಿದ್ದಾರೆ.

ಭಗತ್ ಸಿಂಗ್ ರಾಜಕೀಯ ಚಟುವಟಿಕೆಗೆ ಇಳಿಯುವ ಮೂರು ವರ್ಷ ಮೊದಲು ರಶಿಯನ್ ಕ್ರಾಂತಿ ಯಶಸ್ವಿಯಾಗಿ ಭಾರತವನ್ನೂ ಒಳಗೊಂಡಂತೆ ಎಲ್ಲೆಡೆ ತನ್ನ ಪ್ರಭಾವ ಬೀರಲಾರಂಭಿಸಿತ್ತು. ಅಪಾರ ಸಂಖ್ಯೆಯ ಕಾರ್ಮಿಕರು ಭಾರತದಲ್ಲೂ ಕಮ್ಯುನಿಸ್ಟರ ನೇತೃತ್ವದಲಿ ಹೋರಾಟಕ್ಕಿಳಿದು ಮಹತ್ವದ ರಾಜಕೀಯ ಬೇಡಿಕೆಗಳನ್ನು ಎತ್ತಿಕೊಳ್ಳಬೇಕೆಂದು ಕಾಂಗ್ರೆಸ್ ಮುಂದಾಳುಗಳ ಮೇಲೆ ಒತ್ತಡ ಹೇರಲು ಪ್ರಾರಂಭವಾಗಿತ್ತು.

ಇಂತಹ ಹಿನ್ನೆಲೆಯಲ್ಲಿ ಲಾಹೋರ್ ಪಿತೂರಿಯ ಮೊಕದ್ದಮೆಗೊಳಗಾದ ಭಗತ್ ಸಿಂಗ್ ತನ್ನ ರಾಜಕೀಯ ಗೊತ್ತುಗುರಿಗಳನ್ನು ಹೀಗೆ ಸ್ಪಷ್ಟಪಡಿಸಿದ್ದ. ಸಾಮ್ರಾಜ್ಯ ಶಾಹಿಯ ಸ್ವರೂಪ ಮತ್ತು ಭಾರತೀಯ ಜನತೆ ಸಾಮ್ರಾಜ್ಯಶಾಹಿಯ ಗುಲಾಮಗಿರಿಯಲ್ಲಿರುವುದನ್ನು ಗುರುತಿಸಿದ್ದ ಆತ ಮಾರ್ಕ್ಸ್‌ವಾದಿ ತಿಳುವಳಿಕೆಗೆ ತೀರಾ ಹತ್ತಿರವಾಗಿದ್ದ. "ಸಮಾಜದ ಆಮೂಲಾಗ್ರ ಪರಿವರ್ತನೆ ತೀರಾ ಅಗತ್ಯ. ಈ ಅಗತ್ಯವನ್ನು ಮನಗಂಡಿರುವ ಜನ ಸಮಾಜವನ್ನು ಸಮಾಜವಾದದ ನೆಲೆಯಲ್ಲಿ ಪುನಃ ಸಂಘಟಿಸುವುದು ತಮ್ಮ ಕರ್ತವ್ಯವೆಂದು ಭಾವಿಸಬೇಕು. ಇದನ್ನು ಮಾಡದಿದ್ದರೆ, ಮನುಷ್ಯ ಮನುಷ್ಯನನ್ನು ಮತ್ತು ರಾಷ್ಟ್ರಗಳು ರಾಷ್ಟ್ರಗಳನ್ನು ಶೋಷಿಸುವ ವ್ಯವಸ್ಥೆಯನ್ನು ಕೊನೆಗಾಣಿಸದಿದ್ದರೆ ಮಾನವಕುಲ ಎದುರಿಸುತ್ತಿರುವ ಇಂದಿನ ಸಂಕಷ್ಟ ಮತ್ತು ಹತ್ಯಾಕಾಂಡಗಳನ್ನು ನಿಲ್ಲಿಸುವುದು ಅಸಾಧ್ಯ."

"ನಮ್ಮ ಅರ್ಥದಲ್ಲಿ ಕ್ರಾಂತಿಯೆಂದರೆ ಮುಗ್ಗಟ್ಟು ಮತ್ತು ಕುಸಿತಗಳಿಲ್ಲದ ಸಮಾಜವೊಂದರ ನಿರ್ಮಾಣ. ಅಲ್ಲಿ ಕಾರ್ಮಿಕ ವರ್ಗದ ಸಾರ್ವಭೌಮತೆಯನ್ನೇ ಒಪ್ಪಿಕೊಳ್ಳಲಾಗುವುದು;ಜಗತ್ತಿನ ಎಲ್ಲಾ ರಾಷ್ಟ್ರಗಳ ಒಕ್ಕೂಟವೊಂದು ನಿರ್ಮಾಣವಾಗಿ ಅದು ಬಂಡವಾಳಶಾಹೀಯ ಗುಲಾಮಗಿರಿ ಮತ್ತು ಸಾಮ್ರಾಜ್ಯಶಾಹಿ ಯುದ್ಧಗಳಿಂದ ಮಾನವ ಕುಲವನ್ನು ಬಿಡುಗಡೆಗೊಳಿಸಬೇಕು" ಎಂದಿದ್ದಾನೆ.

ಲೆನಿನ್ ಅವರ ಪುಣ್ಯದಿನವಾದ ಜನವರಿ 31. 1930ರಂದು ನ್ಯಾಯಾಲಯದ ಕಟಕಟೆಗೆ ವಿಚಾರಣೆಗಾಗಿ ಬಂದ ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳು ಕೂಗಿದ ಘೋಷಣೆ "ಸಮಾಜವಾದಿ ಕ್ರಾಂತಿ ಚಿರಾಯುವಾಗಲಿ" "ಕಮ್ಯುನಿಸ್ಟ್ ಅಂತರಾಷ್ಟ್ರೀಯ ಚಿರಾಯುವಾಗಲಿ" ಲೆನಿನ್ ನಿನ್ನ ಹೆಸರು ಅಜರಾಮರವಾಗಲಿ" "ಸಾಮ್ರಾಜ್ಯಶಾಹಿಗೆ ಧಿಕ್ಕಾರ". ಅದೇ ದಿನ ಅವರು ಕಮ್ಯುನಿಸ್ಟ್ ಅಂತರಾಷ್ಟ್ರೀಯಕ್ಕೆ ಕಳುಹಿಸಿದ ಸಂದೇಶದ ಪಾಠ ಹೀಗಿದೆ. "ಲೆನಿನ್ ಅವರ ಈ ಪುಣ್ಯ ದಿನದಂದು ಈ ಮಹಾನ್ ಚೇತನದ ಆದರ್ಶಗಳನ್ನು ಕಾರ್ಯಗತಗೊಳಿಸಲು ದುಡಿಯುತ್ತಿರುವ ಎಲ್ಲರಿಗೂ ನಮ್ಮ ಹಾರ್ದಿಕ ಶುಭಾಶಯಗಳನ್ನು ಅರ್ಪಿಸುತ್ತೇವೆ. ರಶಿಯಾವು ನಡೆಸುತ್ತಿರುವ ಮಹತ್ವದ ಪ್ರಯೋಗಗಳಿಗೆ ಯಶಸ್ಸು ದೊರೆಯಲೆಂದು ಹಾರೈಸುತ್ತೇವೆ. ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಸ್ವರದೊಂದಿಗೆ ನಮ್ಮ ಧ್ವನಿಯನ್ನೂ ಸೇರಿಸುತ್ತೇವೆ. ಕಾರ್ಮಿಕ ವರ್ಗದ ಜಯ ಎಂದೆಂದೂ ಖಚಿತ. ಬಂಡವಾಳಶಾಹೀಯ ಸೋಲು ಅನಿವಾರ್ಯ. ಸಾಮ್ರಾಜ್ಯಶಾಹೀ ಸತ್ತುಹೋಗಲಿ".

ನಮ್ಮನ್ನು ಗುಂಡಿಟ್ಟು ಸಾಯಿಸಿ

ಲಾಹೋರ್ ಪಿತೂರಿ ಮೊಕದ್ದಮೆಯಲ್ಲಿ ಶಿಕ್ಷೆಗೊಳಗಾಗಿ ಮರಣದಂಡ

[6ನೇ ಪುಟ ನೋಡಿ]

ರಾಯಚೂರು ಕೃಷಿ ಕೂಲಿಕಾರರ ಜಿಲ್ಲಾ ಸಮಾವೇಶ

ಕನಿಷ್ಟ ಕೂಲಿ ಇಲ್ಲನೆ, ಕೆಲಸದ ಭದ್ರತೆಯೂ ಇಲ್ಲದೆ ದಿನೇದಿನೇ ಬಿಗಡಾಯಿಸುತ್ತಿರುವ ಪರಿಸ್ಥಿತಿಯಲ್ಲಿ ಒಂದು ವೇಳೆಯ ಗಂಜಿಗೂ ಗತಿಯಿಲ್ಲದೆ ಸಾವು ಬದುಕಿನ ಮಧ್ಯೆ ಕೃಷಿಕಾರ್ಮಿಕರು ತತ್ತರಿಸುತ್ತಿರುವ ಇವತ್ತಿನ ಸಂದರ್ಭದಲ್ಲಿ ಒಂದು ಮಹತ್ವದ ಹೆಜ್ಜೆಯಾಗಿ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯ ರಾಯಚೂರು ಜಿಲ್ಲಾ ಸಮಾವೇಶವು ಮಾರ್ಚ್ 12 ರಂದು ಸಿಂಧನೂರಿನಲ್ಲಿ ಜರುಗಿತು.

ಮಧ್ಯಮ ರೈತ ಸಣ್ಣ ರೈತನಾಗಿ, ಸಣ್ಣ ರೈತ ತನ್ನ ತುಂಡು ಭೂಮಿಯನ್ನು ಕಳೆದುಕೊಂಡು ಕೃಷಿ ಕೂಲಿಕಾರನಾಗಿ ಭೂಮಾಲಿಕರ ಮನೆ ಬಾಗಿಲಿಗೆ ಹೋಗಬೇಕಾದ ಪರಿಸ್ಥಿತಿ ಉಂಟಾಗಿದೆ. ಇಡೀ ದೇಶಕ್ಕೆ ಅನ್ನವನ್ನೊದಗಿಸುವ, ದೇಶದ ಬೆನ್ನೆಲುಬಾಗಿರುವ ಗ್ರಾಮೀಣ ಜನತೆಯ ಬದುಕು ತುಂಬಾ ಭೀಕರವಾಗಿದೆ. ಇಡೀ ಜೀವನದುದ್ದಕ್ಕೂ ತುಂಡು ಭೂಮಿಯ ಕನಸನ್ನೇ ಉಸಿರಾಗಿಸಿಕೊಂಡ ಮಣ್ಣಿನ ಮಕ್ಕಳು ಇಂದು ಹೊಟ್ಟೆ ಪಾಡಿಗಾಗಿ ದೂರ ದೂರದ ಊರುಗಳಿಗೆ ಗುಳೆ ಹೋಗುತ್ತಿದ್ದಾರೆ. ಹೀಗೆ ನೋವೇ ತಾವಾಗಿರುವ ಈ ಜನತೆಯ ಸಂಘಟನೆ ಅತ್ಯಂತ ಅಗತ್ಯವಾಗಿದೆ. ಭೂಮಿ, ಗೇಣಿ ಪ್ರಶ್ನೆ, ಕನಿಷ್ಟ ಕೂಲಿ ಮುಂತಾದ ಬೇಡಿಕೆಗಳಿಗಾಗಿ ಇವರು ಎದುರು ನಿಂತರೆ, ರೈತ ಸಮೂಹ ತಾನೂ ಒಂದಾಗಿ ತನ್ನ ಬೆಳೆಗೆ ಬೆಂಬಲಿತ ಬೆಲೆ, ಕಡಿಮೆ ದರದಲ್ಲಿ ಬೀಜ ಗೊಬ್ಬರ, ಬಾವಿಸಾಲ ಮುಂತಾದುವುಗಳಿಗಾಗಿ ಹೋರಾಟ ನಡೆಸಬೇಕಾಗುತ್ತದೆ. ಇದಕ್ಕಾಗಿ ಕೃಷಿ ಕೂಲಿಕಾರರ ಪ್ರತ್ಯೇಕ ಹೋರಾಟ ಇಂದಿನ ಅನಿವಾರ್ಯತೆಯಾಗಿದೆ ಎಂಬುದಾಗಿ ಸಮಾವೇಶಕ್ಕೆ ಉದ್ಘಾಟಕರಾಗಿ ಆಗಮಿಸಿದ್ದ ಕಾ. ಗಂಗಾಧರ ಕುಷ್ಟಗಿ ಮತ್ತು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾ ಚಂದ್ರಶೇಖರಬಾಳೆ ಸಮಾವೇಶದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು. ಸಮಾವೇಶದ ಅಧ್ಯಕ್ಷತೆ ಕಾ. ಅಮರಪ್ಪ ಮೈಲಾರ ವಹಿಸಿದ್ದರು. ಅತಿಥಿಗಳಾಗಿ ಕಾ. ಬಸವರಾಜಪ್ಪ ಮಾಲಿ ಪಾಟೀಲ್ ಮತ್ತು ತಾಲೂಕು ಜನತಾ ಪಕ್ಷದ ಅಧ್ಯಕ್ಷರಾದ ಕಲೆಗಣನಾಥ ಕಂಠಿಮಠ ಆಗಮಿಸಿದರು.

ಡಿ.ವೈ.ಎಫ್.ಐ. ಎಸ್.ಎಫ್.ಐ. ಸಿ.ಐ ಟಿ.ಯು. ಮತ್ತು ಮಹಿಳಾ ಸಂಘಟನೆಯ ಸೌಹಾರ್ದ ಪ್ರತಿನಿಧಿಗಳು ಸಮಾವೇಶಕ್ಕೆ ಶುಭಾಶಯಗಳನ್ನು ಕೋರಿದರು.

ಸಮಾವೇಶವು ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಪ್ರಧಾನ ಸಂಚಾಲಕರಾಗಿ ಕಾ. ಲಿಂಗಪ್ಪ, ಸಂಚಾಲಕರಾಗಿ ಕಾ.ಕೆ. ಬಸವರಾಜ, ಟಿ. ಲಿಂಗಪ್ಪ, ಕೆ. ಕರಿಯಪ್ಪ ಮತ್ತು ನಿರೂಪಾಕ್ಷ ಕುಷ್ಟಗಿ ಅವರುಗಳು ಆಯ್ಕೆಯಾದರು

ಸಮಾವೇಶವು ಕೃಷಿ ಕೂಲಿಕಾರರ ಸಮಸ್ಯೆಗಳಿಗೆ ಸಂಬಂಧಿಸಿದ 14 ಗೊತ್ತುವಳಿಗಳನ್ನು ಅಂಗೀಕರಿಸಿದೆ.

ಅಧ್ಯಯನ ಶಿಬಿರ

ಮಾರ್ಚ್ 12ರಂದು ಸಿಂಧನೂರಿನಲ್ಲಿ ನಡೆದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯ ರಾಯಚೂರು ಜಿಲ್ಲಾ ಸಮಾವೇಶದ ಅಂಗವಾಗಿ ಪ್ರತಿನಿಧಿಗಳಿಗೆ 3 ದಿನದ ಅಧ್ಯಯನ ಶಿಬಿರವನ್ನು ನಡೆಸಲಾಯಿತು.

ಮಾರ್ಚ್ 13ರಂದು ಪ್ರಾರಂಭಗೊಂಡ ತರಗತಿಯನ್ನು ಕಾ. ಚಂದ್ರಶೇಖರಬಾಳೆ ನಡೆಸಿಕೊಟ್ಟರು14ರಂದು ಕಾ. ಜಿ.ಎನ್. ನಾಗರಾಜ್ ಅವರು 'ಭೂ ಸಂಬಂಧಗಳ ಪ್ರಶ್ನೆ ಮತ್ತು ಮಂಡಲ್, ಜಿಲ್ಲಾ ಪರಿಷತ್‌ಗಳ ಕಾರ್ಯವಿಧಾನ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. 15ರಂದು 'ಕಾರ್ಮಿಕ ವರ್ಗದಲ್ಲಿ ಪಕ್ಷದ ಕಾರ್ಯಚರಣೆ' ಎಂಬ ವಿಷಯದ ಮೇಲೆ ಕಾಂಗ್ರೆಸ್ ಬಾಳೆಯವರು ಉಪನ್ಯಾಸ ನೀಡಿದರು.

ವರದಿ : ಮಹೇಶ್ ಮನ್ನಾಪುರ

ಕಾರ್ಮಿಕರ ಮೇಲೆ ಗೋಲಿಬಾರ್ ಸಿಐಟಿಯು ಖಂಡನೆ

ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ಗೆ ಸೇರಿದ ಮಿನರ್ವ ಮಿಲ್‌ನಲ್ಲಿ ಆಡಳಿತವರ್ಗ ಒಪ್ಪಂದಕ್ಕೆ ವಿರುದ್ಧವಾಗಿ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಯತ್ನಗಳನ್ನು ಕೆಲವು ತಿಂಗಳಿನಿಂದ ಮಾಡುತ್ತಾ ಬಂದಿದೆ. ಕಾರ್ಮಿಕರು ಆಡಳಿತವರ್ಗದ ಈ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸುತ್ತಾ ಬಂದಿದ್ದಾರೆ.ಈ ಹೋರಾಟದ ಮುಖಂಡತ್ವವನ್ನು ಸಿ.ಐ.ಟಿ ಯು. ಸಂಘವು ವಹಿಸುತ್ತಿದೆ. ಆಧುನಿಕ ಏರ್‌ಜೆಟ್ ಮಗ್ಗಗಳನ್ನು ಹೊರದೇಶದಿಂದ ಆಮದು ಮಾಡಿಕೊಂಡು ಮಿಲ್ಲಿನೊಳಗೆ ತರಲು ಪ್ರಯತ್ನಿಸಿದಾಗ ಕಾರ್ಮಿಕರು ಪ್ರತಿಭಟಿಸಿದರು, ಬಂಧನಕ್ಕೊಳಗಾದರು. ಆಡಳಿತ ವರ್ಗವು ಯಾವುದೇ ಕಾರ್ಮಿಕರನ್ನು ಕೆಲಸದಿಂದ ತೆಗೆಯುವುದಿಲ್ಲವೆಂಬ ಭರವಸೆ ಕೊಟ್ಟ ನಂತರ ಕೆಲಸ ಮುಂದುವರಿಸಲಾಯಿತು. ಇದಾದ ಕೆಲವು ದಿನಗಳಲ್ಲೇ ಆಡಳಿತ ವರ್ಗ 85 ಕಾರ್ಮಿಕರನ್ನು ರಿಟ್ರೆಂಚ್ ಮಾಡಿ,ಇದನ್ನು ಪ್ರತಿಭಟಿಸಿದ ಕಾರಣ ಮೂವರು ಸಿ.ಐ.ಟಿ.ಯು. ಕಾರ್ಯಕರ್ತರನ್ನು ಸಸ್ಪೆಂಡ್ ಮಾಡಲಾಗಿದೆ. ಇದನ್ನು ಪ್ರಶ್ನಿಸಿ ಶಾಂತಿಯುತ ಪ್ರದರ್ಶನ ನಡೆಸುತ್ತಿದ್ದ ಕಾರ್ಮಿಕರ ಮೇಲೆ ಅಧಿಕಾರದ ಅಹಂಭಾವದಲ್ಲಿ ಸಿಬ್ಬಂದಿ ಅಧಿಕಾರಿ ಎ. ಎಂ. ಪಾಟೀಲ್‌ರವರು ಕಾರ್ಮಿಕರ ಹೋರಾಟವನ್ನು ಬಗ್ಗುಬಡಿಯುವುದಾಗಿ ಹೇಳುತ್ತಾ ಗುಂಡು ಹಾರಿಸಿದ್ದಾರೆ ಸಿ.ಐ ಟಿ.ಯು.ನಾಯಕ ಚಂದ್ರಶೇಖರ್‌ರವರು ತಲೆಯನ್ನು ಸವರಿಕೊಂಡು ಹೋದ ಗುಂಡೇಟಿನಿಂದ ಆಶ್ಚರ್ಯಕರ ರೀತಿಯಲ್ಲಿ ಪಾರಾಗಿದ್ದಾರೆ. ಕೆಲವು ಕಾರ್ಮಿಕರಿಗೆ ಗುಂಡೇಟಿನಿಂದ ಗಾಯವಾಗಿದೆ. ನ್ಯಾಯ ಕೇಳಲು ಹೋಗಿ ಅಧಿಕಾರಿಯ ದಾಳಿಗೆ ತುತ್ತಾದ ಕಾರ್ಮಿಕರನ್ನು ಸಹ ಪೋಲೀಸರು ಬಂಧಿಸಿ ಗಂಭೀರವಾದ ಆಪಾದನೆಗಳನ್ನು ಹೊರಿಸಿರುವುದನ್ನು ಸಿ.ಐ.ಟಿ.ಯು. ಖಂಡಿಸುತ್ತದೆ.

ಬಂಧಿತ ಕಾರ್ಮಿಕರನ್ನು ಕೂಡಲೆ ಬಿಡುಗಡೆ ಮಾಡಿ ಘಟನೆಯ ಬಗ್ಗೆ ತನಿಖೆ ನಡೆಸಲು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತದೆ. ಆಡಳಿತ ವರ್ಗ ಕಾರ್ಮಿಕರನ್ನು ಬಲಪ್ರಯೋಗದಿಂದ ಬೀದಿಪಾಲು ಮಾಡುವುದನ್ನು ತಡೆಗಟ್ಟಬೇಕೆಂದು ಸಹ ಸಿ.ಐ ಟಿ.ಯು. ಒತ್ತಾಯಿಸುತ್ತದೆ. ನಗರದ ಎಲ್ಲಾ ಕಾರ್ಮಿಕರು ಆಡಳಿತ ವರ್ಗದ ದಬ್ಬಾಳಿಕೆಯನ್ನು ಮತ್ತು ಗೋಲೀಬಾರನ್ನು ಖಂಡಿಸಿ ಮಿನರ್ವ ಮಿಲ್ ಕಾರ್ಮಿಕರ ನ್ಯಾಯಯುತ ಹೋರಾಟವನ್ನು ಬೆಂಬಲಿಸಬೇಕೆಂದು ಸಿ.ಐ.ಟಿ.ಯು. ರಾಜ್ಯ ಸಮಿತಿಯು ವಿನಂತಿಸುತ್ತದೆ.

(6ನೇ ಪುಟವನ್ನು ನೋಡಿ)

ಆಗ ಸಾಲ ಮೇಳ ಈಗ ಜಪ್ತಿ ಮೇಳ

ಬಳ್ಳಾರಿಯಲ್ಲಿ ಪ್ರಾಂತ ರೈತ ಸಂಘದ ಹೋರಾಟ

ಮೂರು ವರುಷಗಳಿಂದಲೂ ಸತತ ಬರಗಾಲಕ್ಕೆ ತುತ್ತಾಗಿರುವ ಹಗರಿಬೊಮ್ಮನಹಳ್ಳಿ ತಾಲೂಕಿನ ರೈತರು ತೀವ್ರವಾದ ಸಂಕಷ್ಟದಲ್ಲಿರುವಾಗ, ಈ ಕೂಡಲೇ ಸಾಲವನ್ನು ರೈತರುನೊಂದಾಯಿಸಬೇಕು, ಇಲ್ಲದಿದ್ದರೆ ಆಸ್ತಿ-ಪಾಸ್ತಿಗಳನ್ನು ಮುಟ್ಟುಗೋಲು ಹಾಕಲಾಗುವುದೆಂದು ವ್ಯವಸಾಯ ಸಹಕಾರ ಸಂಘದವರು ಎಚ್ಚರಿಕೆಯ ನೋಟೀಸನ್ನು ನೀಡಿದ್ದಾರೆ. ಇತ್ತೀಚೆಗೆ ತುಂಗಭದ್ರಾ ನದಿಯಿಂದ ನೀರಿನ ಸರಬರಾಜು ಆಗುತ್ತಿದ್ದು ಸಾಲ ಮರು ಪಾವತಿ ಮಾಡದವರಿಗೆ ನೀರಿನ ಪೂರೈಕೆ ನಿಲ್ಲಿಸಲಾಗುವುದೆಂದೂ, ಅಲ್ಲದೇ ಜಪ್ತಿ ಕಾರ್ಯ ನಡೆಸಲಾಗುವುದೆಂದು ತಿಳಿಸಿದ್ದಾರೆ. ಈಗಾಗಲೇ ಜಪ್ತಿ 'ಮೇಳ' ಆರಂಭಗೊಂಡಿದೆ.

ಈ ನೀತಿಯನ್ನು ಪ್ರತಿಭಟಿಸಿರುವ ಕರ್ನಾಟಕ ಪ್ರಾಂತ ರೈತ ಸಂಘವು ದಿನಾಂಕ : 4-3-87 ರಂದು ಉಪ್ಪಿನಾಯ್ಕನಹಳ್ಳಿಯಿಂದ ಮರಬ್ಬಿಹಾಳ್ ಸೊಸೈಟಿಯವರೆಗೆ ಸುಮಾರು 150 ರೈತರು ಕಾಲು ನಡಿಗೆ ಜಾಥಾ ನಡೆಸಿ ತಾಲ್ಲೂಕು ಸಮಿತಿ ಸಂಚಾಲಕ ವೀರಸಂಗಯ್ಯನವರ ನೇತೃತ್ವದಲ್ಲಿ ಮನವಿ ಪತ್ರ ಸಲ್ಲಿಸಿದೆ.

ಎರಡನೆ ಕಂತಿನ ಹಣ ಪಾವತಿಗೆ ಒತ್ತಾಯ

1970ರಲ್ಲಿ ದಿವಂಗತ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ವಿಜಯನಗರ ಉಕ್ಕಿನ ಕಾರ್ಖಾನೆಗೆಂದು ತೋರಣಗಲ್ಲಿನಲ್ಲಿ ಅಡಿಗಲ್ಲು ಹಾಕಿದರು. ಇದಕ್ಕೆಂದೇ ಫಲವತ್ತಾದ ಭೂಮಿಗಳನ್ನೊಳಗೊಂಡಂತೆ ಸಾವಿರಾರು ಎಕರೆ ಜಮೀನುಗಳನ್ನು ರೈತರಿಂದ ವಶಪಡಿಸಿಕೊಳ್ಳಲಾಯಿತು.

ಹದಿನೇಳು ವರುಷಗಳು ಗತಿಸಿ ಹೋದರೂ ಉಕ್ಕಿನ ಕಾರ್ಖಾನೆಯ ಹೊಗೆ ಏಳಲೇ ಇಲ್ಲ. ಬದಲಾಗಿ ಜಮೀನಿಗೆ ಹಾಕಲ್ಪಟ್ಟ ಕಬ್ಬಿಣದ ಮುಳ್ಳು ಬೇಲಿಯನ್ನೂ ಮೀರಿಸಿ, ಬೆಳೆದ ಬೇಲಿಗಿಡಗಳು ಜನತೆಯ ಆಶೋತ್ತರಗಳನ್ನು ಆಳವಾಗಿ ಘಾಸಿಗೊಳಿಸುತ್ತವೆ. ದುಡಿಯುವ ಕೈಗಳಿಗೆ ಕೆಲಸವಿಲ್ಲ.

ಈಗಾಗಲೇ ರೈತರಿಂದ ವಶಪಡಿಸಿಕೊಂಡಿರುವ ಭೂಮಿಗೆ ಎರಡನೆಯ ಕಂತಿನ ಹಣ ಇದುವರೆಗೂ ನೀಡಲಾಗಿಲ್ಲ. ತಕ್ಷಣ ಇದರ ವಿತರಣೆಗೆ ಒತ್ತಾಯಿಸಿ ದಿನಾಂಕ 18-3-87ರಂದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ರೈತರು ತೋರಣಗಲ್ಲಿನಿಂದ-ಬಳ್ಳಾರಿಗೆ ನಡೆದು ಜಿಲ್ಲಾಧಿಕಾರಿ, ಜಿಲ್ಲಾ ಪರಿಷತ್-ಅಧ್ಯಕ್ಷರಿಗೆ ಹಾಗೂ ಇತರ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ನಂತರ ನಡೆದ ಸಭೆಯಲ್ಲಿ ಕಾ.ವೀರಸಂಗಯ್ಯ, ಕಾಂ.ತಿಮ್ಮಪ್ಪ ಕಾ.ಚನ್ನಬಸಯ್ಯ ಕಾಂ. ಯು. ಷಣ್ಮುಖಪ್ಪ ಮಾತನಾಡಿದರು. ಬೇಡಿಕೆ ಕೂಡಲೇ ಈಡೇರಿಸಲು ಒತ್ತಾಯಿಸಲಾಯಿತಲ್ಲದೇ ಉಗ್ರಹೋರಾಟಕ್ಕೆ ನಿರ್ಧರಿಸಲಾಗಿದೆ.

ರೈಲ್ವೆ ನಿಲ್ದಾಣದಲ್ಲಿ ಚುನಾವಣಾ ಪ್ರಚಾರ

ಮಾರ್ಚ್ 20 ಮತ್ತು 21 ರ ಎರಡು ರಾತ್ರಿಗಳು ಬೆಂಗಳೂರು ರೈಲ್ವೇ ಸ್ಟೇಷನ್ನಿನಲ್ಲಿ ಡಿ.ವೈ.ಎಫ್.ಐ. ಕಾರ್ಯಕರ್ತರು ಕೇರಳ ರಾಜ್ಯದಲ್ಲಿ ಮಾರ್ಚ್ 23ರಂದು ನಡೆಯಲ್ಲಿದ್ದ ಚುನಾವಣೆಯಲ್ಲಿ ಸಿಪಿಐ [ಎಂ] ನೇತೃತ್ವದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಪರವಾಗಿ ಚುನಾವಣಾ ಪ್ರಚಾರ ನಡೆಸಿದರು.

ಕೇರಳ ರಾಜ್ಯದ ಹಲವು ಭಾಗಗಳಿಗೆ ತಲುಪಲಿದ್ದ ಜನರಿಗೆ ಕರ ಪತ್ರ ನೀಡಲಾಯಿತು. ಬೋಗಿಗಳಿಗೆ ಕೈ ಬರಹ ಪೋಸ್ಟರ್‌ಸ್ ಅಂಟಿಸಲಾಯಿತು.

ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಂ ಎಸ್.ಎಫ್.ಐ. ರಾಜ್ಯಕಾರ್ಯದರ್ಶಿ ಎಸ್.ಆರ್. ಆರಾಧ್ಯ, ಡಿ.ವೈ ಎಫ್.ಐ. ಜಿಲ್ಲಾ ಕಾರ್ಯದರ್ಶಿ ಟಿ. ಶಿವಶಂಕರ್ ಅಧ್ಯಕ್ಷರಾದ ಕಾ. ಶ್ರೀನಿವಾಸ್ ಇವರುಗಳು ಚುನಾವಣಾ ಪ್ರಚಾರದ ಮುಖಂಡತ್ವ ವಹಿಸಿದ್ದರು.

ಕುಂದಾಪುರ ತಾಲ್ಲೂಕಿನಲ್ಲಿ

ಕೃಷಿ ಕಾರ್ಮಿಕರ ಗ್ರಾಮ ಸಮಿತಿ

ಕುಂದಾಪುರ ತಾಲ್ಲೂಕು ಕುಂಬಾಶಿ ಗ್ರಾಮದ ರೈತ ಮತ್ತು ಕೃಷಿಕೂಲಿಗಾರರ ಸಭೆ ಕಾ. ಮಂಜು ಮರಕಲ್ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ ೨ರಂದು ನಡೆಯಿತು. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ. ಅಬ್ರಹಾಂ ಕರ್ಕಡ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕಾ. ದಾಸ್ ಭಂಡಾರಿ, ಕೋಟೇಶ್ವರ ಮಂಡಲ ಪಂಚಾಯತ್ ಸದಸ್ಯರಾದ ಕಾ. ವೆಂಕಟೇಶ ನಾಯಕ್ ಮತ್ತು ಕುಂದಾಪುರ ನಗರ ಸಭಾ ಸದಸ್ಯರಾದ ಕಾ. ವಿ ಆನಂದ್ ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಕುಂಬಾಶಿ ಮಂಡಲ ಪಂಚಾಯತ್ ಸದಸ್ಯರಾದ ಕಾ. ಅಣ್ಣಯ್ಯ ಪುತ್ರನ್ ನೆರೆದ ಸಭಿಕರನ್ನು ಸ್ವಾಗತಿಸಿದರು. ಕುಂಬಾಶಿ ಯುವಕ ಮಂಡಲದ ಅಧ್ಯಕ್ಷ ಕಾ. ರಾಮಕೃಷ್ಣ ಹೇರ್ಳೆ ಪ್ರಾಸ್ತಾವಿಕ ಭಾಷಣ ಮಾಡಿದರು. ಸಭೆಯಲ್ಲಿ ರೈತ ಹಾಗೂ ಕೃಷಿ ಕೂಲಿಕಾರರ ಗ್ರಾಮ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಕಾ. ಮಂಜ ಮರಕಲ, ಉಪಾಧ್ಯಕ್ಷರಾಗಿ ಕಾ. ರಾಮಮರಕಲ,ಕಾ. ಸಂಜೀವ, ಕಾರ್ಯದರ್ಶಿಯಾಗಿ, ಕಾ. ರಾಮಕೃಷ್ಣ ಹೇರ್ಳೆ ಜತೆ ಕಾರ್ಯದರ್ಶಿಗಳಾಗಿ ಕಾ. ಮಹಾಬಲ ಪೂಜಾರಿ ಮತ್ತು ಶ್ರೀಮತಿ ಚಂದು ಪೂಜಾರಿ. ಆಯ್ಕೆಯಾಗಿದ್ದಾರೆ. ಅಲ್ಲದೆ 15 ಮಂದಿ ಸಮಿತಿ ಸದಸ್ಯರನ್ನು ಸಭೆ ಆಯ್ಕೆ ಮಾಡಿದೆ.

ಸುಳ್ಯದ ರೈತರಿಂದ ನ್ಯಾಯಬೆಲೆ ಅಂಗಡಿ ಒತ್ತಾಯಿಸಿ ಜಾಥಾ

ಸುಳ್ಯ ತಾಲೂಕಿನ ಹರಿಹರ ಪಳ್ಳಿತಡ್ಕ ಮಂಡಲ ಪಂಚಾಯತ್‌ಗೆ ಸೇರಿದ ಐನಕಿದು ಗ್ರಾಮ ಸಮಿತಿಯ ನೇತೃತ್ವದಲ್ಲಿ ಗ್ರಾಮದ ಕೇಂದ್ರ ಸ್ಥಳದಲ್ಲಿ ನ್ಯಾಯ ಬೆಲೆ ಅಂಗಡಿ ಶಾಖೆ ಹಾಗೂ ದಿನ ಬಳಕೆ ವಸ್ತುಗಳ ಮಾರಾಟ ಶಾಖೆ ತೆರೆಯಲು ಒತ್ತಾಯಿಸಿನೂರಾರು ಗ್ರಾಮಸ್ಥರುಕೂಡಿಐನಕಿದು ಗ್ರಾಮದಿಂದ ಸುಬ್ರಹ್ಮಣ್ಯಪೇಟೆಗೆ ಜಾಥಾ ನಡೆಸಲಾಯಿತು.ಅಲ್ಲದೆ 80 ಜನರ ಸಹಿಯನ್ನೊಳಗೊಂಡ ಮನವಿ ಪತ್ರವನ್ನು ಸಹಕಾರಿ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರಿಗೆ ಸದ್ರಿ ಸಂಘದ ಕಾರ್ಯದರ್ಶಿಯ ಮೂಲಕ ನೀಡಲಾಯಿತು. ಜಾಥಾ ಕಾರ್ಯಕ್ರಮದಲ್ಲಿ ಹರಿಹರ ಪಳ್ಳಿ ತಡ್ಕ, ಕೊಲ್ಲಮೊಗ್ರು, ನಾಲ್ಕೂರು ಮತ್ತು ನೆಲ್ಲೂರು ಕೆಮ್ರಾಜೆ ಗ್ರಾಮ ಸಮಿತಿಯವರು ಸುಳ್ಯ ತಾಲ್ಲೂಕು ರೈತ ಸಂಘದ ಉಪಾಧ್ಯಕ್ಷರಾದ ಕಾ. ಎಂ. ಬಾಲಕೃಷ್ಣ ಗೌಡ, ಹರಿಹರ ಪಳ್ಳತಡ್ಕ ಮಂಡಲ ಪಂಚಾಯಿತಿಯ ಸಿ.ಪಿ.ಐ. [ಎಂ] ಸದಸ್ಯ ಕಾಂ.ಕೆ. ತಿಲಕ ಚಂದ್ರ ಭಾಗವಹಿಸಿದರು.

ನಮ್ಮ ವರ್ಗ ಸಂದರ್ಭದಲ್ಲಿ ಎಡ ಪ್ರಜಾಪ್ರಭುತ್ವ ಸರಕಾರಗಳು

- ಬಿ. ಟಿ. ರಣದಿವೆ

ಎಡರಂಗ - ಎಡ ಪ್ರಜಾಪ್ರಭುತ್ವ ರಂಗದ ವಿಜಯದ ಹಿಂದೆ

ಸಂಸದೀಯ ಹೋರಾಟದಲ್ಲಿ ಸಿ.ಪಿ.ಐ. [ಎಂ] ಭಾಗವಹಿಸುವ ಈ ನಿರ್ದಿಷ್ಟ ರೂಪ; ರಾಜ್ಯ ಮಟ್ಟದಲ್ಲಿ ಸರ್ಕಾರಗಳ ರಚನೆ ಅರಿಯದ ಜನ ಯೋಚಿಸುವಷ್ಟು ಶಾಂತಿಯುತವಾದದ್ದೇನಲ್ಲ. ಅದಕ್ಕಾಗಿ ಸಾವಿರಾರು ಜೀವಗಳ ಬೆಲೆತೆತ್ತಿದ್ದೇವೆ. ತೀವ್ರ ರಾಜಕೀಯ ಸಂಘರ್ಷ, ಆಳುವ ಕಾಂಗ್ರೆಸ್ ಪಕ್ಷದ ಧಾಳಿಗಳನ್ನು ಹಿಮ್ಮೆಟ್ಟಿಸಲು ಒಂದಾದ ಮೇಲೊಂದು ವಿಧಾನ ಸಭೆಯ ಹೊರಗೆ ಚಳುವಳಿಗಳನ್ನು ಹೂಡಬೇಕಾಯಿತು. 71-77ರ ನಡುವೆ ಅರೆಪ್ಯಾಸಿಸ್ಟ್ ಭಯೋತ್ಪಾದಕ ಆಡಳಿತೆಯ ಸಮಯದಲ್ಲಿ ಪ.ಬಂಗಾಳದಲ್ಲಿ 1200 ಸಿ.ಪಿ.ಐ. [ಎಂ] ಕೇರಳದಲ್ಲಿಯೂ 300 ಜನ ಸಂಗಾತಿಗಳು ಸಿ.ಪಿ.ಐ. ಮುಖ್ಯಮಂತ್ರಿ ಅಚ್ಯುತಮೆನನ್ನರ ಆಳ್ವಿಕೆಯಲ್ಲಿ ಕೊಲೆಯಾಗಿದ್ದಾರೆ ಮಾತ್ರವಲ್ಲ 197: ರ ನಂತರ ಎಡರಂಗ ಸರ್ಕಾರ ಪ.ಬಂಗಾಳದಲ್ಲಿ ಆಡಳಿತ ನಡೆಸಲಾರಂಭಿಸಿದ ಮೇಲೂ 500 ಜನ ನಮ್ಮ ಕಾರ್ಯಕರ್ತರು ನಮ್ಮ ವರ್ಗ ಶತ್ರುಗಳಿಂದ ಕೊಲೆಯಾಗಿದ್ದಾರೆ.

ಎಂ. ಬಸವಪುನ್ನಯ್ಯ

ಎಡರಂಗ ಸರಕಾರ ಕಾರ್ಯ ನಿರ್ವಹಣೆ, ಅದರ ಪಾತ್ರ, ಅದು ಯಾವ ಮಿತಿಗಳೊಳಗೆ ಕೆಲಸ ಮಾಡಬೇಕಾಗಿದೆ, ಯಾವ ಕರ್ತವ್ಯಗಳನ್ನು ಸಾಧಿಸಬೇಕಾಗಿದೆ ಎಂಬುದನ್ನು ವರ್ಗ ಸಂದರ್ಭದಲ್ಲಿಟ್ಟು ನೋಡದ ಹೊರತು ಗೊಂದಲ ಪರಿಹಾರವಾಗುವುದಿಲ್ಲ.

ನಾವು ಎಡರಂಗ ಸರ್ಕಾರವನ್ನು ಒಂದು ಪಕ್ಷ ಇನ್ನೊಂದು ಪಕ್ಷದ ಮೇಲೆ ಪಡೆಯುವ ಯಾವುದೇ ಚುನಾವಣಾ ವಿಜಯದಂತೆ ಪರಿಗಣಿಸಬಹುದೇ ? ಎನ್.ಟಿ ಆರ್. ಅಥವಾ ಹೆಗ್ಗಡೆ ಮಂತ್ರಿಮಂಡಲದ ಜೊತೆ ಎಡರಂಗ ಸರ್ಕಾರವನ್ನೂ ಸಮೀಕರಿಸಬಹುದೇ ? ಅನೇಕ ಜನ ಇವನ್ನು ಒಂದೇ ಸಮನಾಗಿ ಕಾಣುತ್ತಿದ್ದಾರೆ. ಆದರೆ ಸಂವಿಧಾನಿಕವಾಗಿ ಆಯ್ಕೆಯಾಗಿದ್ದರೂ, ಇವು ಈ ದಿನದ ಸಾಮಾಜಿಕ ವ್ಯವಸ್ಥೆಗೆ ಹೊರಗಿನದಾದ ಅಂಶವನ್ನು ಪ್ರತಿನಿಧಿಸುತ್ತವೆ. ಅವು ಎಲ್ಲಿಯೂ ಅಧಿಕಾರದಲ್ಲಿರಬಹುದೆಂದು ನಿರೀಕ್ಷಿಸಲಾಗದ ವರ್ಗವನ್ನು, ಯಾವ ವರ್ಗದ ಪ್ರಗತಿಯನ್ನು ಆಳುವವರ್ಗಗಳು ಸಿಮಿತಗೊಳಿಸಿಯೇ ತೀರುತ್ತವೆಯೋ ಆ ವಗವನ್ನು ಪ್ರತಿನಿಧಿಸುತ್ತವೆ. ಈ ಎರಡು ಎಡರಂಗ ಸರ್ಕಾರಗಳು ನಮ್ಮ ಸಮಾಜದ ವರ್ಗ ಸಂಘರ್ಷದ ನೇರ ಫಲಗಳು

ಹೋರಾಟದ ಆಯುಧಗಳು

ಈ ಸರಕಾರಗಳ ಪೂರ್ಣ ಸಾಧ್ಯತೆಗಳನ್ನು ನಾವು ಉಪಯೋಗಿಸಿಕೊಳ್ಳುವ ಬಗೆ ಹೇಗೆ ? ಕೆಲವರು ಪೂರ್ಣ ಸಾಧ್ಯತೆ ಎಂದರೆ ಯಾವುದಾದರೊಂದು ಪರಿಹಾರಗಳನ್ನು ನೀಡುವುದು ಎಂದು ಬಗೆಯುತ್ತಾರೆ. ಪರಿಹಾರಗಳೇನೊ ಅವಶ್ಯಕ ನಿಜ. ಆದರೆ ಅದು ಸರ್ಕಾರದ ಪೂರ್ಣ ಸಾಮರ್ಥ್ಯವನ್ನು ಹೊರತರುವುದಿಲ್ಲ. ಇನ್ನೂ ಕೆಲವರು ಈ ಸರ್ಕಾರಗಳು, ಬಂಗಾಳ ತ್ರಿಪುರಾಗಳ ಮುಖವನ್ನೇ ಬದಲಾಯಿಸಿಬಿಡಬಹುದೆನ್ನುತ್ತಾರೆ. ಇದು ಸುಧಾರಣಾವಾದ. ಈಗಿನ ಸಾಮಾಜಿಕ ವ್ಯವಸ್ಥೆ ಇರುವವರೆಗೂ ಯಾವುದೇ ಮೂಲಭೂತ ಬದಲಾವಣೆ ಸಾಧ್ಯವಿಲ್ಲ. ಪೂರ್ಣ ಸಾಧ್ಯತೆಗಳೆಂದರೆ, ಬಂಡವಾಳಶಾಹಿ ಭೂಮಾಲಿಕ ವರ್ಗಗಳನಿಯಂತ್ರಣದಲ್ಲಿರುವ ಇಂದಿನ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಚೌಕಟನಲ್ಲಿ ಕೆಲಸ ಮಾಡುತ್ತಾ, ಮೂಲವರ್ಗಗಳನ್ನು ಕಾರ್ಮಿಕ ಹಾಗೂ ರೈತ ವರ್ಗ ಅಣಿನೆರೆಸುವ ಸಾಧನವಾಗಿ, ನಾಳೆ ಬೇರೊಂದು ರೂಪದ ಹೋರಾಟವನ್ನು ಬೀದಿ ಬೀದಿಗಳಲ್ಲಿ. ಹೋರಾಟವನ್ನು ಯಾವ ಜನಸಮೂಹಗಳು ಮಾಡಬೇಕಾಗುತ್ತದೆಯೋ ಆ ಜನಸಮೂಹಗಳು ಮೇಲೆ ನಮ್ಮ ಪ್ರಭಾವವನ್ನು ಸಾಂದ್ರಗೊಳಿಸುವ ಮೂಲವರ್ಗಗಳನ್ನು ಅಣಿನೆರೆಸುವ ಸಾಧನವಾಗಿ ಪರಿಣಮಿಸುವುದೇ ಸರ್ಕಾರದ ಪೂರ್ಣ ಸಾಧ್ಯತೆಯೆಂದರೆ ಅರ್ಥ.

ಒಂದು ಹೋರಾಟದ ಸಾಧನವಾಗಿ ಈ ಸಚಿವ ಸಂಪುಟಗಳು, ಜನತಾ ಪ್ರಜಾಪ್ರಭುತ್ವರಂಗದ ಹೋರಾಟದಲ್ಲಿ ಬಹುಮುಖ್ಯವೆಂದರೆ ನಾವು ಪರಿಗಣಿಸುತ್ತೇವೆಯೋ ಈ ವರ್ಗಗಳ ಮತ್ತು ಜನತೆ, ಧೃಡೀಕರಣಕ್ಕೆ, ಜನಸಮೂಹಗಳ ಮೇಲೆ ಪಕ್ಷದ ಹಿಡಿತವನ್ನು ಮತ್ತಷ್ಟು ಧೃಡಗೊಳಿಸುವುದಕ್ಕೆ ಕಾರಣವಾಗಬೇಕು. ಈ ಉದ್ದೇಶದ ಸಾಧನೆಯಾದರೆ, ಅವುಗಳ ಸಾಮರ್ಥ್ಯದ ಪೂರ್ಣ ಬಳಕೆಯಾದಂತೆಯೇ ಸರಿ.

ರಾಜ್ಯ ಸರಕಾರಗಳು ಮತ್ತು ಪ್ರಭುತ್ವ ಯಂತ್ರ

ಇಡೀ ಪ್ರಭುತ್ವ ಯಂತ್ರ, ಅಧಿಕಾರಶಾಹಿ, ನ್ಯಾಯಾಂಗ ಹಾಗೂ ಪೋಲೀಸ್ ಇಲಾಖೆಗಳ ಈಗಿನ ರಚನೆ ರಾಜ್ಯಗಳ ಮಟ್ಟದಲ್ಲಿ ಕೂಡಾ ಒಂದು ನಿರ್ದಿಷ್ಟ ವರ್ಗಧೋರಣೆಯುಳ್ಳ ಸ್ಥಿತಿವಂತರು ಆಸ್ತಿವಂತರ ಕಡೆಗೆ ಪಕ್ಷಪಾತವುಳ್ಳಯಂತ್ರ ಈಗಿನ ಸಂವಿಧಾನದಡಿಯಲ್ಲಿ ಕಾರ್ಯ ನಿರ್ವಹಿಸಬೇಕಾದ ರಾಜ್ಯ ಸರ್ಕಾರಗಳು ತಮ್ಮ ಜನಪ್ರಿಯ ನೀತಿಯನ್ನು ಕಾರ್ಯಗತಗೊಳಿಸಲು ಬೇಕಾದ ಸಮರ್ಥ ಸಾಧನವಾಗುವಂತೆ ಈ ಪ್ರಭುತ್ವ ಯಂತ್ರವನ್ನು ಪೂರ್ಣವಾಗಿ ಪುನಃರೂಪಿಸುವ ಸ್ವಾತಂತ್ರ್ಯ ಹೊಂದಿಲ್ಲ.

ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವರ್ಗಾಯಿಸುವುದು,ತೀರಾ ಅದಕ್ಷರನ್ನು ಭ್ರಷ್ಟರನ್ನು ಶಿಕ್ಷಿಸುವುದು ನಿಷ್ಠ,ಒಳ್ಳೆಯ ಅಧಿಕಾರಿಗಳ ಮೇಲೆ ಅವಲಂಬಿಸುವುದು ಈ ಯಂತ್ರದಕೇಡನ್ನುಕಡಿಮೆ ಮಾಡಬಹುದೇ ಹೊರತು ಪೂರ್ಣವಾಗಿ ನಿವಾರಿಸಲು ಸಾಧ್ಯವಿಲ್ಲ. ಈ ಮಿತಿಯನ್ನು ಅರ್ಥಮಾಡಿಕೊಳ್ಳಬೇಕು ಮಾತ್ರವಲ್ಲ ಜನರಿಗೂ ಈ ಬಗ್ಗೆ ಅರಿವು ಮೂಡಿಸಬೇಕು.

ಎಂ. ಬಸವಪುನ್ನಯ್ಯ

ಕಾ. ಇ. ಕೆ. ನಾಯನಾರ್

6417 ಮತಗಳ ಅಂತರದಿಂದ ಗೆದ್ದು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಕಾ||ನಾಯನಾರ್‌ರವರ ಚುನಾವಣೆಯ ಫಲಿತಾಂಶ

ತ್ರಿಕಾರಿಪ್ಪುರ : ಒಟ್ಟು ಮತಗಳು: 1,30,974; ಚಲಾಯಿಸಲಾದ ಮತಗಳು: 1,12,272; ಇ.ಕೆ. ನಾಯನಾರ್ [ಸಿಪಿಐ-ಎಂ] 56,037; ಕೆ.ಕುಂಜ್ಞಿಕೃಷ್ಣನ್‌ನಾಯರ್(ಐಎನ್‌ಸಿ) 49,520; ಕೆ.ವಿ. ಲಕ್ಷ್ಮಣ್[ಬಿಜೆಪಿ) 3,328; ಅಲೆಸಿ ಕೃಷ್ಣನ್ (ಸಿಎಂಪಿ) 1,416.

ಎಡ ಪ್ರಜಾಸತ್ತಾತ್ಮಕ ರಂಗ

	1982ರಲ್ಲಿ	1987ಚುನಾವಣೆಯ ಮೊದಲು	1987ರ ಫಲಿತಾಂಶ
ಸಿ.ಪಿ.ಐ[ಎಂ]	26	29	36
ಸಿ.ಪಿ.ಐ (ಎಂ)ಬೆಂಬಲಿತ ಪಕ್ಷೇತರರು	-	-	5
ಸಿ.ಪಿ.ಐ.[ಎಂ] ಹಾಗೂ ಬೆಂಬಲಿತ ಅಭ್ಯರ್ಥಿಗಳು ಒಟ್ಟು			41
ಸಿ.ಪಿ.ಐ.	13	12	16
ಜನತಾ	4	4	7
ಕಾಂಗ್ರೆಸ್[ಎಸ್]	7	6	6
ಆರ್.ಎಸ್.ಪಿ.	4	4	5
ಲೋಕದಳ	-	-	1
ಅಖಿಲ ಭಾರತ ಮುಸ್ಲಿಂ ಲೀಗ್	4	ಐಯುಎಂಎಲ್ ಯುಡಿಎಫ್‌ನಲ್ಲಿ ಜತೆ ವಿಲೀನ	
ಒಟ್ಟು			76

ಸಂಯುಕ್ತ ಪ್ರಜಾಸತ್ತಾತ್ಮಕ ರಂಗ

	1982ರಲ್ಲಿ	1987ಚುನಾವಣೆಯ ಮೊದಲು	1987ರ ಫಲಿತಾಂಶ
ಕಾಂಗ್ರೆಸ್(ಐ)	20		
ಕಾಂಗ್ರೆಸ್(ಎ)	15	37	33
ಐ.ಯು.ಎಂ.ಎಲ್.	14	18	15
ಕೇರಳ ಕಾಂಗ್ರೆಸ್(ಜೆ)	8	16	5
ಕೇರಳ ಕಾಂಗ್ರೆಸ್[ಎಂ]	6		4
ಎನ್.ಆರ್.ಪಿ	2	-	-
ಎನ್.ಡಿ.ಪಿ.	4	4	
ಬೆಂಬಲಿತ ಪಕ್ಷೇತರರು			1
			2
ಬೆಂಬಲಿತ ಸಿ.ಎಂ.ಪಿ.			60
ಇತರ ಪಕ್ಷೇತರ			1
			1

ಪರೂರ್ : ಒಟ್ಟುಮತಗಳು: 95,972; ಚಲಾಯಿಸಲಾದ ಮತಗಳು: 81,647; ಎನ್. ಶಿವನ್ ಪಿಲ್ಲೆ(ಸಿಪಿಐ) 39,495; ಎ.ಸಿ. ಜೋಸ್(ಸ್ವ) 37,129; ಮೋಹನ್‌ಕುಮಾರ್ (ಬಿಜೆಪಿ) 3,404; ವಿಲ್‌ರೋನ್ ಕೆ.(ಸ್ವ) 392; ವಿ. ರವೀದ್ರನಾಥ ಮೆನನ್ (ಸ್ವ)336; ಎ.ಕೆ. ಬಾಲನ್(ಸ್ವ) 14; ಉದಯವರ್ಮ ಥಾಂಪುರಂ (ಸ್ವ) 145; ಜೋನಿ ಪನಾಚಲ್(ಸ್ವ) 122; ಎಂ.ಎ. ಜೋಸೆಫ್(ಸ್ವ) 87.

ಕಣ್ಣಾನೂರು ಜಿಲ್ಲೆ

ಕೂತ್ತುಪರಂಬಾ : ಒಟ್ಟು ಮತಗಳು: 1,11,885; ಚಲಾಯಿಸಲಾದ ಮತಗಳು: 92,147, ಕೆ.ಪಿ. ಮಮ್ಮು ಮಾಸ್ಟರ್ [ಸಿಪಿಐ-ಎಂ] 46,573; ಪಿ. ರಾಮಕೃಷ್ಣನ್[ಐಎನ್‌ಸಿ] 36,871; ಸಿ.ಕೆ. ಪದ್ಮನಾಭನ್ (ಬಿಜೆಪಿ) 5,844; ಎಂ. ಲಕ್ಷ್ಮಣ್ಣ ಮಾಸ್ಟರ್[ಸ್ವ] 184; ಅಂಪಿಲಾದು ಮೋಹನನ್ (ಸ್ವ) 617.

ವೈನಾಡು ಜಿಲ್ಲೆ

ಕಲ್ಪೆಟ್ಟ : ಒಟ್ಟು ಮತಗಳು: 1,08,058; ಚಲಾಯಿಸಲಾದ ಮತಗಳು: 91,134; ಎಂ.ಪಿ. ವೀರೇಂದ್ರಕುಮಾರ್[ಜೆಪಿ] 52,362; ಸಿ. ಮಮ್ಮೂಟ್ಟಿ[ಐಯುಎಂಎಲ್] 34,404; ಎಂ.ಪಿ. ಶಾಂತಿವರ್ಮ ಜೈನ್ [ಸ್ವ] 3,090; ಆರ್. ಗೋಪಿನಾಥನ್[ಸ್ವ] 363; ಎಂ.ಟಿ. ಹರಿದಾಸ್ [ಸ್ವ] 62.

ಕೋಳಿಕೋಡು ಜಿಲ್ಲೆ

ಕುನ್ನಮಂಗಲಂ [ಎಸ್.ಸಿ.] : ಒಟ್ಟುಮತಗಳು: 1,02,836; ಚಲಾಯಿಸಲಾದ ಮತಗಳು: 86,475; ಸಿ.ಪಿ. ಬಾಲನ್‌ವೈದ್ಯಾರ್(ಸಿಪಿಐ-ಎಂ) 37,557; ಕೆ.ಪಿ. ರಾಮನ್(ಐಯುಎಂಎಲ್) 37,264; ಕೆ.ಪಿ.ವಾಸು (ಬಿಜೆಪಿ) 11,124; ಸಿ.ಪಿ. ಚಾತನ್(ಸ್ವ) 159.

ಮೆಪ್ಪಾಯೂರ್ : ಒಟ್ಟು ಮತಗಳು: 1,15,186; ಚಲಾಯಿಸಲಾದ ಮತಗಳು: 97,458; ಎ. ಕನರನ್ (ಸಿಪಿಐ-ಎಂ) 48,337; ಎ.ವಿ. ಅಬ್ದುರ್‌ರಹಿಮಾನ್‌ಹಾಜಿ(ಐಯುಎಂಎಲ್) 44,663; ಪಿ.ಕೆ. ಶ್ರೀಧರನ್(ಬಿಜೆಪಿ) 3,295; ಎಂ.ಟಿ. ಪೊಕರ್(ಸ್ವ) 221; ಲೀಲ ಚೆಲ್ಲಪ್ಪನ್(ಸ್ವ) 455.

ಕ್ಯಾಲಿಕಟ್ : ಒಟ್ಟು ಮತಗಳು: 1,19,540; ಚಲಾಯಿಸಲಾದ ಮತಗಳು: 96,940; ಎಂ. ದಾಸನ್(ಸಿಪಿಐ-ಎಂ) 44,810; ಎಂ. ಕಮಲಾಮ್ (ಐಎನ್‌ಸಿ) 37,102; ಸಿ. ಪ್ರಭಾಕರನ್ (ಬಿಜೆಪಿ) 12,234; ಎಲ್. ಸಹದೇವನ್(ಸ್ವ) 195; ಕೆ. ಸಹದೇವನ್(ಸ್ವ) 918; ಎ. ವಿಶ್ವನಾಥನ್(ಸ್ವ) 492; ವಿ.ಕೆ. ಸದಾನಂದನ್(ಸ್ವ) 105· ಪಿ.ಜೆ. ಥೋಮಸ್(ಸ್ವ) 153; ಉನ್ನಿತ್ ನಂಬಿಯಾರ್(ಸ್ವ) 133.

ತ್ರಿಚೂರ್ ಜಿಲ್ಲೆ

ಇರವಂ : ಒಟ್ಟು ಮತಗಳು: 1,10,769; ಚಲಾಯಿಸಲಾದ ಮತಗಳು: 94,650; ಗೋಪಿ ಕೆ. (ಸಿಪಿಐ-ಎಂ) 41,314; ಬೆನ್ನಿ ಬೆಹನನ್ (ಐಎನ್‌ಸಿ) 25,134; ಸಿ. ಪೌಲೋಸ್(ಸ್ವ) 24,890;

ಈ ಚುನಾವಣೆಗಳ ಫಲಿತಾಂಶ ದೇಶದ ರಾಜಕೀಯಕ್ಕೆ ಹೊಸ ದಿಕ್ಕು ನೀಡಲಿದೆ.

ರಾಮಕೃಷ್ಣ ಹೆಗ್ಡೆ

ರಾಷ್ಟ್ರದ ರಾಜಕಾರಣಕ್ಕೆ ಹೊಸ ತಿರುವು

ಪ ಬಂಗಾಳ ಎಡರಂಗ ಸರಕಾರ 9ವರ್ಷ ಮುಗಿಸಿ ಹತ್ತನೆಯ ವರ್ಷಕ್ಕೆ ಕಾಲಿಟ್ಟ ದಿವಸ ಎಡರಂಗ ನಾಯಕ ಹಾಗೂ ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೊ ಸದಸ್ಯರಾದ ಕಾಂ. ಜ್ಯೋತಿ ಬಸುರವರು "ಇಡೀ ವಿಶ್ವದ ಇತಿಹಾಸದಲ್ಲಿ ಕಮ್ಯೂನಿಸ್ಟ್ ಪಕ್ಷವೊಂದರ ನೇತೃತ್ವದ ಸರ್ಕಾರವೊಂದು ಬಂಡವಾಳಶಾಹಿ ಸಂವಿಧಾನದಡಿಯಲ್ಲಿ ಚುನಾಯಿತವಾಗಿ ಇಷ್ಟು ದೀರ್ಘಕಾಲ ಆಡಳಿತ ನಡೆಸಿದ್ದು ಇದೇ ಪ್ರಥಮ." ಎಂದರು ಹೀಗೆ ವಿಶ್ವ ದಾಖಲೆಯನ್ನು ಮಾಡಿದ ಸಿ.ಪಿ.ಐ. (ಎಂ) ನಾಯಕತ್ವದ ಎಡರಂಗ ಸರಕಾರ ಮತ್ತೊಮ್ಮೆ ಮೂರನೇ ಬಾರಿಗೆ ಚುನಾಯಿತವಾಗಿ ಅನೇಕ ದಾಖಲೆಗಳನ್ನು ಸ್ಥಾಪಿಸುತ್ತಿದೆ.

ನಮ್ಮ ದೇಶದಲ್ಲಿ ಯಾವುದೇ ಕಾಂಗ್ರೆಸ್ ವಿರೋಧಿ ಪಕ್ಷಗಳ ಸರ್ಕಾರವೊಂದು ಸತತವಾಗಿ ಮೂರನೇ ಬಾರಿಗೆ ಚುನಾಯಿತವಾಗಿರುವುದು ಇದೇ ಮೊದಲ ಬಾರಿ. ಅತ್ಯಂತ ದೀರ್ಘಕಾಲದಿಂದ ವಿರೋಧ ಪಕ್ಷಗಳ ಆಡಳಿತದಲ್ಲಿರುವ ತಮಿಳುನಾಡಿನಲ್ಲಿಯೂ ಒಂದೇ ಪಕ್ಷ ಮೂರನೇ ಬಾರಿ ಆಯ್ಕೆಯಾಗುವುದು ಸಾಧ್ಯವಾಗಿಲ್ಲ. ಜಮ್ಮು-ಕಾಶ್ಮಿರದಲ್ಲಿಯೂ ಇದು ಸಾಧ್ಯವಾಗಿಲ್ಲ.

ಪ. ಬಂಗಾಳ ಸರಕಾರಕ್ಕೆ ಮತ್ತೊಂದು ವೈಶಿಷ್ಟ್ಯವಿದೆ. ನಮ್ಮ ದೇಶದಲ್ಲಿ ಅತ್ಯಂತ ದೀರ್ಘಕಾಲ ವಿರೋಧ ಪಕ್ಷಗಳ ಆಡಳಿತದಲ್ಲಿರುವ ತಮಿಳುನಾಡು ಜಮ್ಮು ಕಾಶ್ಮಿರಗಳಲ್ಲಿ ಯಾವ ಪಕ್ಷ ಆಡಳಿತಕ್ಕೆ ಬಂದರೂ-ಅದು ಡಿ.ಎಂ.ಕೆ. ಆಗಿರಲಿ, ಅಣ್ಣಾ ಡಿ.ಎಂ.ಕೆ ಆಗಿರಲಿ, ನ್ಯಾಷನಲ್ ಕಾನ್ಫರೆನ್ಸ್ ಪಕ್ಷವೇ ಆಗಲಿ, ಅತ್ಯಲ್ಪ ಕಾಲದಲ್ಲಿ ಕಾಂಗ್ರೆಸ್‌ಗೆ ಮೊರೆ ಹೋಗಬೇಕಾದ ಅನಿವಾರ್ಯತೆಗೊಳಗಾಗುತ್ತವೆ.

ಹಿಂದೆ ಕಾಂಗ್ರೆಸ್ - ಡಿ.ಎಂ.ಕೆ. ಮೈತ್ರಿ, ಅದನ್ನು ವಿರೋಧಿಸಿ ಎಲ್ಲಾ ವಿರೋಧ ಪಕ್ಷಗಳ ಬೆಂಬಲ ಪಡೆದು ಆಯ್ಕೆಯಾದ ಅಣ್ಣಾ ಡಿಎಂಕೆ ಈ ಮೈತ್ರಿಗೆ ತಿಲಾಂಜಲಿಯನ್ನಿತ್ತು ಕಾಂಗ್ರೆಸ್ ಮಡಿಲನ್ನು ಸೇರಿಕೊಂಡ ಬಗೆ ಮತ್ತು ಈಗ ನ್ಯಾಶನಲ್ ಕಾನ್ಫರೆನ್ಸ್-ಕಾಂಗ್ರೆಸ್(ಐ)ಮೈತ್ರಿ ಇಂತಹ ಅಪವಿತ್ರ ಮೈತ್ರಿಗಳ ಉದಾಹರಣೆಗಳು. ಕೇಂದ್ರ-ರಾಜ್ಯ ಸಂಬಂಧಗಳು ಪುನರೂಪಿತವಾಗದ ಈ ಸಂದರ್ಭದಲ್ಲಿ ಎಲ್ಲ ಆರ್ಥಿಕ ರಾಜಕೀಯ ಅಧಿಕಾರವೂ ಕೇಂದ್ರದಲ್ಲಿಯೇ ಕೇಂದ್ರೀಕೃತವಾಗಿರುವಾಗ, ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ನ ನಿಮ್ಮ ಉಸಿರುಗಟ್ಟಿ ಸುತ್ತೇನೆಂಬ ಬೆದರಿಕೆಗೆ ತಲೆಬಾಗಿದವು ಈ ಪಕ್ಷಗಳು. ಅಷ್ಟೇ ಅಲ್ಲ ತಮ್ಮ ಪಕ್ಷದ ಹಿಂದಿರುವ ಭೂಮಾಲೀಕ ಬಂಡವಾಳಶಾಹಿಗಳ ಹಿತ ರಕ್ಷಿಸಲು ಜನಪರ ಕಾರ್ಯಗಳನ್ನು ಕೈಗೊಳ್ಳಲಾರದೆ, ಜನರನ್ನು ಸಂಘಟಿಸಿ ಅವರ ಪ್ರಜ್ಞೆಯನ್ನು ವಿಕಾಸ ಮಾಡುವ ಕೆಲಸವನ್ನು ಮಾಡುವುದರಲ್ಲಿ ಸೋತು ಕಾಂಗ್ರೆಸ್‌ನ ಮಡಿಲಿಗೆ ಬಿದ್ದಿವೆ. ಆ ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಭದ್ರವಾದ ನೆಲೆಯನ್ನೊದಗಿಸಿವೆ. ಅದರ ಫಲವೇ ಇಂದು ಲೋಕ ಸಭೆಯ ಸ್ಥಾನಗಳು ನಮಗೆ ವಿಧಾನ ಸಭೆಯ ಸ್ಥಾನಗಳ ನಿಮಗೆ ಎನ್ನುವ ಈ ಒಪ್ಪಂದಗಳು ಹಾಗೂ ಲೋಕ ಸಭೆಯಲ್ಲಿ ಎಲ್ಲಾ ವಿರೋಧ ಪಕ್ಷಗಳೂ ಸಭಾತ್ಯಾಗ ಮಾಡುವಾಗ, ಪ್ರತಿಭಟಿಸುವಾಗ ಅಣ್ಣಾ ಡಿಎಂಕೆ ಗುಲಾಮರಂತೆ ತಲೆಬಾಗಿ ಕಾಂಗ್ರೆಸ್(ಐ) ಪಾದಗಳನ್ನು ಚುಂಬಿಸುವುದು.

ಇಂತಹ ಗುಲಾಮತನಕ್ಕೆ ಬಲಿ ಬೀಳದೆ ಕೇಂದ್ರದ ಆರ್ಥಿಕ ನಿರ್ಬಂಧಗಳಿಗೆ ಮಣಿಯದೆ ಸೆಣಸಿ ನಿಂತದ್ದು ಮಾತ್ರವಲ್ಲ ಪ. ಬಂಗಾಳದ ಸಾಧನೆ. ವಿರೋಧ ಪಕ್ಷಗಳು ಸರ್ಕಾರದಲ್ಲಿರುವ ಇನ್ನೆರಡು ರಾಜ್ಯಗಳಾದ ಆಂಧ್ರ ಕರ್ನಾಟಕಗಳನ್ನು ನೋಡಿದರೆ ಸಾಕು ಅರಿವಾದೀತು, ಪ. ಬಂಗಾಳದ ಎಡರಂಗದ ಹಿರಿಮೆ.

ಆಂಧ್ರ ಕರ್ನಾಟಕಗಳಲ್ಲಿ ಆ ರಾಜ್ಯ ಸರಕಾರಗಳು, ತಮಗೆ ಒಂದು ಬಾರಿ ಅಥವಾ ಎರಡುಬಾರಿ ದೊರಕಿದ ಅಲ್ಪ ಬಹುಮತದ ಸೊಕ್ಕು ತಲೆಗೇರಿದ ಈ ಪಕ್ಷಗಳು, ತಮಗೆ ಬೆಂಬಲ ನೀಡಿದ ವಿವಿಧ ದುಡಿಯುವ ವರ್ಗಗಳನ್ನು ಜನ ವಿಭಾಗಗಳನ್ನು ಪ್ರತಿನಿಧಿಸುವ ಪಕ್ಷಗಳನ್ನು ಹೊರಗಿಟ್ಟು ಒಂದು ಐಕ್ಯ ಕಾರ್ಯಾಚರಣೆಯ ಜನಪರ ಕಾರ್ಯಕ್ರಮದ ಆಧಾರವನ್ನು ತೊರೆದು ಸ್ಥಳೀಯ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಮತ್ತೆ ದೊಡ್ಡ ಪ್ರಮಾಣದಲ್ಲಿ ಮತಗಳಿಸುವಂತೆ ಮಾಡಿವೆ.

ಆದರೆ ಪ. ಬಂಗಾಳದಲ್ಲಿ ಕಾಂಗ್ರೆಸ್ [ಐ] ಧೂಳೀಪಟವಾಗುತ್ತಾ ನಡೆದು ಅದಕ್ಕಿರುವ ಜನ ಬೆಂಬಲ ಮತ ಬೆಂಬಲ ಶೇ. 40ರಿಂದ 35ಕ್ಕೆ 35ರಿಂದ ಈ ಬಾರಿ ಮತ್ತೆ ಕೆಳಕ್ಕೆ, ಸ್ಥಾನಗಳಲ್ಲಿ 50ರಿಂದ ಕೆಳಕ್ಕೆ ಸಾಗುವಂತೆ ಕಾಂಗ್ರೆ [ಐ] ಒಳಗೊಳಗೇ ಕಿತ್ತಾಡಿ ನಾಶವಾಗುವಂತೆ ಆಗಿವೆ.

ಪ.ಬಂಗಾಳದಲ್ಲಿ ಚುನಾವಣೆಯಿಂದ ಚುನಾವಣೆಗೆ ಕಾಂಗ್ರೆಸ್ ಒಳಗೊಳಗೇ ನಾಶವಾಗುತ್ತಿರಲು ಎರಡೇ ಕಾರಣ

[6ನೇ ಪುಟ. ನೋಡಿ]

ಈ ಫಲಿತಾಂಶಗಳು ವಿರೋಧ ಪಕ್ಷಗಳಿಗೂ ಒಂದು ಪಾಠ ಕಲಿಸುತ್ತದೆ. ವೈಯಕ್ತಿಕ ಆಕಾಂಕ್ಷೆಗಳನ್ನು ಬದಿಗೊತ್ತಿ ಸೈದ್ಧಾಂತಿಕ ಆಧಾರದ ಮೇಲೆ ಜೊತೆಗೂಡಿ ಸ್ಪರ್ಧೆಗೆ ನಿಂತರೆ ಪರ್ಯಾಯ ಪಕ್ಷವೊಂದನ್ನು ಆದರಿಸಲು ಭಾರತದ ಮತದಾರ ಸಿದ್ಧನಿರುವನೆಂದು ಇದರಿಂದ ಸುಸ್ಪಷ್ಟವಾಗುತ್ತದೆ.

—ಪ್ರಜಾವಾಣಿ

ಕೇರಳ ಚುನಾವಣೆ ಕಾಂಗ್ರೆ ಪರಾಭವ

ಭಿನ್ನ ಭಿನ್ನ ಕಾರಣಗಳೇನು ?

ವಿವಿಧ ಕೋಮು ಹಿತಾಸಕ್ತಿಗಳನ್ನು ಮೆಚ್ಚಿಸುವ ಯು. ಡಿ. ಎಫ್. ಸರ್ಕಾರದ ಧೋರಣೆಯ ವಿರುದ್ಧವೇನೂ ಮತದಾರರು ತೀರ್ಪಿತ್ತಿಲ್ಲ. ಯು.ಡಿ.ಎಫ್. ನೊಳಗಿನ ಅನೈಕ್ಯತೆಯ ವಿರುದ್ಧ ತೀರ್ಪಿತ್ತಿದ್ದಾರೆ.

—ಮಾಜಿ ಮುಖ್ಯ ಮಂತ್ರಿ ಕರುಣಾಕರನ್

ಕೇರಳದಲ್ಲಿ ಕಾಂಗ್ರೆಸ್[ಐ] ಸೋಲಿಗೆ ಕಾರಣ ಶಿಕ್ಷಣದಲ್ಲಿ ಕೋಮು ಆಧಾರಿತ ಮೀಸಲಾತಿ ಮತ್ತು ಯು.ಡಿ ಎಫ್‌ನಲ್ಲಿನ ಕೋಮುವಾದೀ ಮೈತ್ರಿಗಳು

ಪ್ರಧಾನ ಮಂತ್ರಿ ಕಾಂಗ್ರೆಸ್(ಐ) ಸಂಸತ್ ಸದಸ್ಯರ ಸಭೆಯಲ್ಲಿ ಮುಖ್ಯಮಂತ್ರಿ ಕರುಣಾಕರನ್ ಸೋಲಿಗೆ ಕಾವೇ ಹೊಣೆಯೆಂದು ಒಪ್ಪಿಕೊಳ್ಳುತ್ತಾ ರಂಗದ ಆಂತರಿಕ ಕಿತ್ತಾಟಗಳೇ ಸೋಲಿಗೆ ಕಾರಣ ಹೊರತು ಸರ್ಕಾರದ ಕಳಪೆ ಕಾರ್ಯ ನಿರ್ವಹಣೆಯಲ್ಲ ಎಂದಿದ್ದಾರೆ. ಆದರೆ ಇವೆರಡನ್ನು ಪ್ರತ್ಯೇಕಿಸುವುದು ಹೇಗೆ ಎಂದು ಅರ್ಥವಾಗುವುದಿಲ್ಲ.

— ಡೆಕ್ಕನ್ ಹೆರಾಲ್ಡ್

ಆಂಧ್ರ ಪುರಸಭಾ ಚುನಾವಣೆಗಳು

ಪಕ್ಷಕ್ಕೆ 81 ಸ್ಥಾನಗಳು

ಈಗಾಗಲೇ ಮುನಿಸಿಪಲ್ ಚುನಾವಣೆಗಳಲ್ಲಿ ಚೇರ್ಮನ್‌ರಾಗಿ ಜಯಗಳಿಸಿರುವ ಖಮ್ಮಂನ ಚಿರಾಪರಿಲಕ್ಷ್ಮಯ್ಯ ಹಾಗೂ ಇಲ್ಲೆಂದು ನ ವೈ. ವಿನಯ ಕುಮಾರರಲ್ಲದೆ ಈ ಕೆಳಗಿನವರು ಕೌನ್ಸಿಲರಾಗಿ ಆಯ್ಕೆಗೊಂಡಿದ್ದಾರೆ.

		ಗುಡಿವಾಡ	2
		ಮಚಲಿಪಟ್ನ	2
		ಏಲೂರು	3
		ನಿಡದವೋಲು	1
		ಪಾಲಕೊಲ್ಲು	1
		ರಾಜಮಂಡ್ರಿ	1
ಆದಿಲಾಬಾದ್	3	ನೆಲ್ಲೂರು	6
ಮಲ್ಕಾಜ್‌ಗಿರಿ	2	ಕಾವಲಿ	1
ಅನಕಪಲ್ಲಿ	2	ಕರ್ನೂಲು	3
ನಲ್ಗೊಂಡ	2	ಗುಡೂರು	1
ವಿ.ರ್‍ಯಾಲಗೂಡಂ	9	ಆದೋನಿ	2
ಸೂರ್ಯಪೇಟೆ	6	ವನಪರ್ತಿ	1
ಭುವನಗಿರಿ	2	ಮಂಗಳಗಿರಿ	2
ಖಮ್ಮಂ	10	ಸತ್ತನಪಲ್ಲಿ	1
ಇಲ್ಲೆಂದು	3		—
ಜನಗಾಂ	1	ಒಟ್ಟು	81

1977ರಿಂದೀಚೆಗೆ ಮೂರನೇ ಸತತ ವಿಜಯದಿಂದ ಶ್ರಿ ಜ್ಯೋತಿ ಬಸು ಹಾಗೂ ಅವರ ತಂಡಕ್ಕೆ ಒಂದು ಗುಣಾತ್ಮಕವಾದ ಪ್ರಸಿದ್ಧಿ ಹಾಗೂ ಪ್ರಭಾವ ಗಳಿಸಿದೆ. ಇದು ಆಡಳಿತದಲ್ಲಿ ಸ್ಥಿರತೆ ಹಾಗೂ ನ್ಯಾಯಕ್ಕಾಗಿ ತಡಕಾಡುವವರಿಲ್ಲ ಮಾತ್ಸರ್ಯ ಉಂಟು ಮಾಡುವಂತದ್ದೇ ಸರಿ. ಎಡರಂಗದ ವಿರುದ್ಧ ರಾಜೀವ್ ಗಾಂಧಿಯವರು ಎರಚಿದ ಹಲವಾರು ವಿವಿಧ ರೂಪಣೆಗಳನ್ನು ಮತದಾರರು ನಿಚ್ಚಳವಾಗಿ ತಿರಸ್ಕರಿಸಿದ್ದಾರೆ. ವಿಶೇಷವಾಗಿ ಅವರು ಅಭಿವೃದ್ಧಿ ಕಾರ್ಯಗಳಲ್ಲಿ ಸಹಕಾರ ನೀಡುವಲ್ಲಿ ಹಾಗೂ ಜಿ. ಎನ್. ಎಲ್. ಎಫ್. ನಂತಹ ವಿಚ್ಛಿದ್ರಕಾರಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳಿಗೆ ಯಾವುದೇ ರೀತಿಯ ಪ್ರೋತ್ಸಾಹ ನೀಡದಿರುವಲ್ಲಿ ಪ್ರಧಾನ ಮಂತ್ರಿಗಳು ಈ ವಾಸ್ತವನ್ನು ಒಪ್ಪಿಕೊಳ್ಳದೆ ವಿಧಿಯಿಲ್ಲ.

'ಹಿಂದೂ' ಪತ್ರಿಕೆ

ಮಲಬಾರ್ ಪ್ರದೇಶದಲ್ಲಿ ಮತೀಯ ಶಕ್ತಿಗಳ ಪ್ರಭಾವ

ಕಾಂಗ್ರೆಸ್ (ಐ) ಪಕ್ಷ ಮತೀಯ ಶಕ್ತಿಗಳ ಜೊತೆ ಮಾಡಿಕೊಂಡ ಅಪವಿತ್ರ ಮೈತ್ರಿಯ ಫಲ: ಮುಸ್ಲಿಂಲೀಗ್ ಹಾಗೂ ಅದಕ್ಕೆ ವಿರುದ್ಧವಾಗಿ ಹಿಂದು ಮತೀಯವಾದದ ಬೆಳವಣಿಗೆಯಲ್ಲಿ ಪರ್ಯವಸಾನ

ಕಾಸರಗೋಡು ಜಿಲ್ಲೆ

ಕಾಸರಗೋಡು : ಒಟ್ಟು ಮತದಾರು: 1,08,105; ಚಲಾಯಿಸಲಾದ ಮತಗಳು: 87786; ಸಿ.ಟಿ. ಅಹಮದಾಲಿ [ಐಯುಎಂಎಲ್] 41.407, ಶ್ರೀಕೃಷ್ಣ ಭಟ್(ಬಿಜೆಪಿ) 27,350, ಎಂ. ರಾಮಣ್ಣ ರೈ (ಸಿಪಿಐ-ಎಂ) 17,049, ವೈ. ಗೋಪಾಲನ್(ಸ್ವ) 582, ಅಬ್ದುಲ್ಲ ಮಲ್ಲತ್(ಸ್ವ)120, ಆರಯಲ್ ಶೇರೀಫ್ (ಸ್ವ) 92.

ಮಂಜೇಶ್ವರ : ಒಟ್ಟು ಮತಗಳು: 1,05,370, ಚಲಾಯಿಸಲಾದ ಮತಗಳು: 63.937, ಚೆರ್ಕುಲಂ ಅಬ್ದುಲ್ಲ [ಐಯುಎಂಎಲ್] 33,853 ಹೆಚ್. ಶಂಕರ ಆಳ್ವ[ಬಿಜೆಪಿ] 27,107, ಡಾ. ಎ. ಸುಬ್ಬಾರಾವ್[ಸಿಪಿಐ] 19,924.

ಕಣ್ಣಾನೂರು : ಒಟ್ಟು ಮತಗಳು: 1,07,998; ಚಲಾಯಿಸಲಾದ ಮತಗಳು: 86,512. ಪಿ. ಬಾಸ್ಕರನ್ [ಐಎನ್‌ಸಿ] 42,784; ಎ.ಕೆ. ಸಸೀಂದ್ರನ್ [ಐಎನ್‌ಸಿ[ಎಸ್] 34,739; ಕೆ. ಕುಂಜಕಣ್ಣನ್ [ಬಿಜೆಪಿ] 7,330; ಎನ್. ಜಯಪ್ರಕಾಶ್[ಸ್ವ] 510; ಟಿ.ಕೆ. ಆಚಾರಿ[ಸ್ವ]238; ಚಂದ್ರಬಾಬು ಕೆ. [ಸ್ವ] 135; ಪಿ. ಟಿ. ರಾಧಕೃಷ್ಣನ್[ಸ್ವ] 103; ಪಿ. ಕಮಲಾಕ್ಷನ್[ಸ್ವ] 164.

ಅರಿಕೋಟ್ : ಒಟ್ಟು ಮತಗಳು: 99,765; ಚಲಾಯಿಸಲಾದ ಮತಗಳು: 86,076; ಎಂ.ವಿ. ರಾಘವನ (ಸಿಎಂಪಿ) 41,629; ಇ.ಪಿ. ಜಯರಾಜನ್(ಸಿಪಿಐ-ಎಂ) 40,240; ಕೆ.ಎನ್. ನಾರಾಯಣನ್[ಬಿಜೆಪಿ] 2,887; ಕೆ. ಕೊರಾನ್[ಸ್ವ] 754; ಟಿ.ಪಿ. ಅಬ್ದುಲ್ಲಾ [ಸ್ವ] 119.

ಸಿ. ಪಿ. ಐ. (ಎಂ) ಅಭ್ಯರ್ಥಿಗಳ ವಿಜಯ

ನೇಮಂ-ಬಿ.ಜೆ.ತಂಗಪ್ಪನ್

ಒಟ್ಟು ಮತಗಳು-1,26,562, ಚಲಾಯಿಸಲಾದ ಮತಗಳು-96,010 ಸಿ.ಪಿ ಐ.[ಎಂ]-47,748ಎನ್. ಆರ್ ಪಿ.-26,993 ಬಿ.ಜೆ.ಪಿ.-473,

ಮಲಪ್ಪುರಂ- ಡಿ.ಶಿವದಾಸ್ ಮೆನನ್

ಒಟ್ಟು ಮತಗಳು-1,05, 629 ಚಲಾಯಿಸಲಾದ ಮತಗಳು-83,850 ಸಿಪಿಐ [ಎಂ]-43,419 ಕಾಂಗ್ರೆಸ್ [ಐ]-33, 105 ಬಿಜೆಪಿ-4,320

ಕಳಕೊಟ್ಟಂ

ಪ್ರೊ॥ ನಬೀಸ್ಸಾಉಮ್ಮಾಳ್ ಒಟ್ಟು ಮತಗಳು-1,26,140 ಚಲಾಯಿಸಲಾದ ಮತಗಳು-1,06,929 ಸಿಪಿಐ (ಎಂ) ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು) 52,415 ಮುಸ್ಲಿಂಲೀಗ್-38 981, ಬಿಜೆಪಿ-11,208 (1982ರಲ್ಲಿ ಜಯಿಸಿದ್ದ ಕಾಂಗ್ರೆಸ್‌ನಿಂದ ಕಿತ್ತುಕೊಂಡ ಸ್ಥಾನ)

ವಡಕ್ಕಾರ್- ಎಸ್. ಶರ್ಮಾ

ಒಟ್ಟು ಮತಗಳು-1, 06,217 ಚಲಾಯಿಸಲಾದ ಮತಗಳು-92, 445 ಸಿಪಿಐ[ಎಂ] 43,736 ಕಾಂಗ್ರೆ 43 324 ಬಿಜೆಪಿ 3,883

ಅಟ್ಟಿಂಗಲ್-ಅನಂದನ್

ಒಟ್ಟು ಮತಗಳು-1,11,785 ಚಲಾಯಿಸಲಾದ ಮತಗಳು-80,973 ಸಿಪಿಐ [ಎಂ] 42,413 ಕಾಂಗ್ರೆ 33 528 ಸಿ.ಎಂ.ಪಿ 316.

ಎಡಕ್ಕಾಡು-ಟಿ. ಭರತನ್

ಒಟ್ಟು ಮತಗಳು-92,265 ಸಿಪಿ ಐ [ಎಂ]-45, 068 ಕಾಂಗ್ರೆ-41, 012 ಬಿ.ಜೆ.ಪಿ. 3832

"ನಯಾ ಬಂಗಾಲ್" ಭ್ರಮೆಗೆ ಸೋಲು

ಪ. ಬಂಗಾಳ ಕೇರಳಗಳಲ್ಲಿನ ಇತ್ತೀಚಿನ ಚುನಾವಣೆಗಳೆಂದರೆ ಜನ ಸಮಸ್ತರ ಪ್ರಜ್ಞೆಯ ಮೇಲೆ, ಆ ಪ್ರಜ್ಞೆಯ ಒಳಗೆ ಉಳಿದಿರುವ-ತಲೆತಲಾಂತರಗಳಿಂದ ನಮ್ಮೆಲ್ಲರ ಮೇಲೆ ಹೇರಿ ಕುಳಿತುಕೊಂಡಿರುವ ಊಳಿಗಮಾನ್ಯ ಜಾತೀಯ ಕಂದಾಚಾರಗಳ ಮೇಲೆ ಧಾಳಿ. ಬಂಡವಾಳಶಾಹಿ ಭೂಮಾಲೀಕ ವರ್ಗಗಳು ಜನರ ರಕ್ತವನ್ನು ಹೀರಿ ಗಳಿಸಿದ ಹಣದ ಕೊಬ್ಬಿನಿಂದ ಸ್ಥಾಪಿಸಿರುವ ಪತ್ರಿಕಾ ಸಮೂಹಗಳ ಮೂಲಕ, ಆಳುವ ಸರ್ವಾಧಿಕಾರಿ ಶಕ್ತಿಯ ಹಿಡಿತದಲ್ಲಿರುವ ಆಕಾಶವಾಣಿ ದೂರದರ್ಶನಗಳು ನಮ್ಮ ಜನ ಸಾಮಾನ್ಯರ ಮೇಲೆ ದುಡಿಯುವ ಜನಸಮುದಾಯದ ಮೇಲೆ ದಿನ ನಿತ್ಯ ಹರಡುತ್ತಿರುವ ಬಂಡವಾಳಶಾಹಿ ಸಿದ್ಧಾಂತಗಳು-ಯುವ ಹಾಗೂ ವೃದ್ಧ, ಯೋಜನೆ ಹಾಗೂ ಯೋಜನೇತರ ಎಂಬಿತ್ಯಾದಿ ವಿಷಯಗಳ ಮೇಲೆ ಧಾಳಿ. ಇಡೀ ಜನ ಸಮುದಾಯವೇ ಪಾಳೆಯಗಾರಿ-ಬಂಡವಾಳಶಾಹಿ ಸಿದ್ಧಾಂತಗಳ ಮೃಗೀಯ ಹಿಡಿತದಿಂದ ಬಿಡಿಸಿಕೊಳ್ಳುವ ಅವರ ಪ್ರಜ್ಞೆ ಅರಳುವ ಹೂವಾಗುವ ಕ್ರಿಯೆ. ಪ್ರತಿದಿನ ಸಿ.ಪಿ.ಐ [ಎಂ]ಹಾಗೂ ಅದರ ಸಾಮೂಹಿಕ ಸಂಘಟನೆಗಳ ಮಾಡುವ ಹೋರಾಟದ ಉಚ್ಚರಾಜಕೀಯ ರೂಪ. ಜನ ತಮ್ಮನ್ನು ತಾವು, ತಮ್ಮ ಹಿತವನ್ನು ತಾವು ಅರಿತುಕೊಳ್ಳುವ ರಕ್ಷಿಸಿಕೊಳ್ಳುವ ಕ್ರಿಯೆ. ಈ ಕ್ರಿಯೆಯಲ್ಲಿ ಇಡೀ ಜನ ಸಮುದಾಯವೇ ತೊಡಗಿಕೊಳ್ಳುವ, ತೊಡಗಿಕೊಳ್ಳುವಂತೆ ಮಾಡುವ ಕೆಲಸವನ್ನೇ ಮಾರ್ಕ್ಸ್‌ವಾದಿ ನಾಯಕರು ನಿರಂತರವಾಗಿ ಮಾಡುತ್ತಿರುವುದು. ಅದರ ಫಲವೇ, ಎಚ್ಚೆತ್ತ ಪ್ರಜ್ಞೆಯು, ಎತ್ತರಕ್ಕೇರಿದ ಪ್ರಜ್ಞೆಯ ಮತದಾರರು 'ನಯಾ ಬಂಗಾಲ್'ನ ಬುರುಗು ಗನಸುಗಳಿಂದ ಭ್ರಮಿತರಾಗಲು ಬಣ್ಣದ ಟಿ.ವಿ.ಯ ಕಾಮನಬಿಲ್ಲಿನಿಂದ, ಆಕಾಶವಾಣಿಯ ಘೋಷಗಳಿಂದ ಮರುಳಾಗಲು ನಿರಾಕರಿಸಿ ಕೇವಲ ಬಾಯಿಮಾತಿನ ಅಸಂಖ್ಯ ಸಣ್ಣಪುಟ್ಟ ಕಾರ್ಯಕರ್ತರ, ಹಾಗೂ ಹೆಲಿಕಾಪ್ಟರುಗಳಿಲ್ಲದ ಕಾಲುನಡೆಯ ನಾಯಕರ ಮಾತಿಗೆ ಒಲಿಯುವುದು. ಅದರ ಫಲವೇ ಕೇರಳ ಪ ಬಂಗಾಳದ ಚುನಾವಣಾ ಫಲಿತಾಂಶಗಳು. ತಮ್ಮ ಬದುಕಿನ ಕಹಿಯನ್ನುಂಡ ಜನ ಕಹಿಗೆ ಕಾರಣವಾದವರನ್ನು ಗುರುತಿಸುವ, ಕೇವಲ ತಮ್ಮ ಬದುಕಿನ ಬಗೆಗೆ ಮಾತ್ರವಲ್ಲದೆ ತಮ್ಮಂತಹ ಎಲ್ಲರ ಬದುಕಿನ-ತಮ್ಮ ವರ್ಗದ ಬದುಕಿನ ಬಗ್ಗೆ ಚಿಂತಿಸುವುದು-ವರ್ಗದ ಪ್ರಜ್ಞೆಯನ್ನು ಪಡೆಯುವುದು-ತಮ್ಮ ರಾಜ್ಯದ ಬಗ್ಗೆ ಅದರ ಜೊತೆಗೇ ಇಡೀ ದೇಶದ ಬಗ್ಗೆ, ಇಡೀ ವಿಶ್ವದ ಬಗ್ಗೆ ಚಿಂತಿಸುವುದು. ಎತ್ತರಕ್ಕೇರಿದ ಪ್ರಜ್ಞೆಯ ಜೊತೆಗೇ ಇಡೀ ದೇಶವು ಎತ್ತರಕ್ಕೇರುತ್ತದೆ. ನಮ್ಮ ರಾಜ್ಯದಲ್ಲಿಯೂ ಅದರ ಪ್ರತಿಬಿಂಬ ಮೂಡಲು ದುಡಿಯೋಣ. ○

ರಾಷ್ಟ್ರದ ರಾಜಕಾರಣಕ್ಕೆ ಹೊಸ ತಿರುವು

[5ನೇ ಪುಟದಿಂದ]

ಪ.ಬಂಗಾಳದಲ್ಲಿ ಚುನಾವಣೆಯಿಂದ ಚುನಾವಣೆಗೆ ಕಾಂಗ್ರೆಸ್ ಒಳಗೊಳಗೆ ನಾಶವಾಗುತ್ತಿರಲು ಎರಡೇ ಕಾರಣಗಳು ಒಂದು, ಕಾಂಗ್ರೆಸ್ [ಐ]ಗೆ ವಿರುದ್ಧವಾಗಿ ಅಧಿಕಾರಕ್ಕೆ ಬಂದ ಪಕ್ಷಗಳು ಚುನಾವಣೆಯ ಮೊದಲು ಮಾತ್ರವಲ್ಲ ಚುನಾವಣೆಯಾಗಿ ಅಧಿಕಾರಕ್ಕೆ ಬಂದ ನಂತರವೂ, ಒಂದು ಚುನಾವಣೆಯಲ್ಲಿ ಮಾತ್ರವಲ್ಲ, 77ರಿಂದ ಇಲ್ಲಿಯವರೆವಿಗೂ ನಡೆದ ಎಲ್ಲ ಚುನಾವಣೆಗಳಲ್ಲಿಯೂ-ವಿಧಾನ ಸಭೆ, ಲೋಕಸಭೆ ಜಿಲ್ಲಾ ಪರಿಷತ್ ಹಾಗೂ ಪುರಸಭೆಗಳ ಚುನಾವಣೆಗಳು-ಹಾಗೆಯೇ ವಿಶ್ವವಿದ್ಯಾನಿಲಯಗಳ ಸೆನೆಟ್ ಸಿಂಡಿಕೇಟ್‌ಗಳು, ಸಹಕಾರಿ ಸಂಘ ಮಾರುಕಟ್ಟೆ ಸಮಿತಿಗಳು ಹೀಗೆ ಎಲ್ಲಾ ರಂಗಗಳಲ್ಲಿಯೂ ಬಹಳ ಮಟ್ಟಿಗೆ ಐಕ್ಯವಾಗಿ ಕಾಂಗ್ರೆಸ್ (ಐ) ಅನ್ನು ಎದುರಿಸಿದ ಫಲ-ಈ ಎಡರಂಗದ ಈ ಐಕ್ಯತೆಯಲ್ಲಿ ನಂಬಿಕೆ ಮೂಡಿದ ಫಲ.

ಎರಡು, ಕಾಂಗ್ರೆಸ್ (ಐ) ಕಾರ್ಯಕ್ರಮಕ್ಕೆ ಪರ್ಯಾಯವಾದ ಒಂದು ಕಾರ್ಯಕ್ರಮಕ್ಕೆ ಎಲ್ಲಪಕ್ಷಗಳೂ ಒಪ್ಪಿರುವುದು ಮಾತ್ರವಲ್ಲ ಅನುಷ್ಠಾನಕ್ಕೆ ತಂದಿರುವುದನ್ನು ಜನ ತಮ್ಮ ಕಣ್ಣೆದುರೇ ಕಂಡಿರುವುದು.

ಜನತಾ ಪಕ್ಷ, ತೆಲುಗು ದೇಶಂ ಪರ್ಯಾಯ ಕಾರ್ಯಕ್ರಮವನ್ನು ಹಾಗೂ ಒಂದು ಐಕ್ಯರಂಗದ ಕಲ್ಪನೆಯನ್ನು ಒಪ್ಪದಿರುವುದರಿಂದಲೇ ಅಲ್ಲಿಕಾಂಗ್ರೆಸ್ (ಐ) ಗೆ ಬಲಬಂದಿರುವುದು.

ರಾಷ್ಟ್ರ ಮಟ್ಟದಲ್ಲಿ ಹಾಗೆಯೇ ರಾಜ್ಯಮಟ್ಟದಲ್ಲಿ ಕಮ್ಯೂನಿಸ್ಟ್ ಪಕ್ಷಗಳನ್ನು ಕೈಬಿಟ್ಟು ತಮ್ಮದೇ ರಂಗವನ್ನು ರಚಿಸುವ ಬಂಡವಾಳಶಾಹಿ ವಿರೋಧ ಪಕ್ಷಗಳ ಯೋಜನೆ ಈ ಎರಡು ರಾಜ್ಯಗಳಲ್ಲಿನ ಫಲಿತಾಂಶದಿಂದ ಹಿಮ್ಮೆಟ್ಟುವುದಂತೂ ಖಚಿತ. ಎಡಪ್ರಜಾಪ್ರಭುತ್ವ ರಂಗದ ಕಲ್ಪನೆ ಇಂದು ಬೃಹದಾಕಾರವಾಗಿ ದೇಶದ ರಾಜಕಾರಣಕ್ಕೆ ದಿಕ್ಕುತೋರುವ ಹಾದಿಯನ್ನು ಬೆಳಗಿಸಿದೆ. ನೋಡದಿರುವವರು ಕೇವಲ ರಾಜಕೀಯ ಕುರುಡರಷ್ಟೇ ಹೊರತು ಬೇರೇನಲ್ಲ.

ಈ ಗೆಲವುಗಳಿಂದ ಕೇರಳ,ಪ.ಬಂಗಾಳದಲ್ಲಿ ಕಾಂಗ್ರೆಸ್ (ಐ) ಮತ್ತಷ್ಟು ವಿನಾಶವಾಗುವುದು ಮಾತ್ರವಲ್ಲ ರಾಷ್ಟ್ರ ಮಟದಲ್ಲಿಯೇ ರಾಜೀವರ ಬಿಗಿ ಮುಷ್ಟಿ ಸಡಲಿ ಒಳಜಗಳಗಳು ತೀವ್ರವಾಗುತ್ತವೆ. ಹೀಗೆ ಕಾಂಗ್ರೆಸ್ [ಐ] ಪಕ್ಷ ದುರ್ಬಲವಾಗುವ, ವಿರೋಧ ಪಕ್ಷಗಳ ಐಕ್ಯತೆ ಬಲವಾಗುವ ಈ ಬೆಳವಣಿಗೆಯ ಪರಿಣಾಮವೇನು ?

ಕಾಂಗ್ರೆಸ್ [ಐ] ಪಕ್ಷ ದುರ್ಬಲವಾಗಿ ತನ್ನ ಅಧಿಕಾರಕ್ಕೆ ಧಕ್ಕೆ ಯೊದಗಿದಾಗ ಕೇವಲ ಆಡಳಿತ ಯಂತ್ರ- ಅಧಿಕಾರಶಾಹಿ,ಪೋಲಿಸು, ಮಿಲಿಟರಿ-ಇವುಗಳೇ ಅವಲಂಬನವಾಗಿ ಕಾಂ ಜ್ಯೋತಿ ಬಸುರವರು ಹೇಳಿರುವಂತೆ ನಮ್ಮ ಪ್ರಜಾಪ್ರಭುತ್ವಕ್ಕೆ ತೀವ್ರ ವಿಕೃತಿಗಳು ಒದಗಬಹುದು. ಅದನ್ನು ಎದುರಿಸಲು ಎಡ ಪ್ರಜಾಪ್ರಭುತ್ವ ರಂಗವನ್ನು ಕಟ್ಟಲು ದುಡಿಯುವುದು ನಮ್ಮೆಲ್ಲರ ಕರ್ತವ್ಯ.

○

ಹಂಚಿನ ಮಜೂರರ ಕೇಳಿಕೆಗೆ ಬೆಂಬಲ

ಏರಿಳಿತ ತಟ್ಟಿ ಭತ್ತೆಗಾಗಿ, ವೇತನ ಮತ್ತು ಬೋನಸ್ಸು ಹೆಚ್ಚಳಕ್ಕಾಗಿ ಹೋರಾಟಕ್ಕೆ ಇಳಿದಿರುವ ಜಿಲ್ಲೆಯ ಸುಮಾರು 7000ಕ್ಕೂ ಹೆಚ್ಚು ಹಂಚಿನ ಕಾರ್ಮಿಕರಿಗೆ ಸೌತ ಕೆನರಾ ಪ್ರೆಸ್ ವರ್ಕರ್ಸ್ ಯೂನಿಯನ್ ಸಂಪೂರ್ಣ ಬೆಂಬಲ ನೀಡುತ್ತದೆ.

ಶಾಂತ ರೀತಿಯಲ್ಲಿ ಸತ್ಯಾಗ್ರಹ ನಡೆಯುತ್ತಿರುವ ಹಂಚಿನ ಕಾರ್ಮಿಕರ ಮೇಲೆ ಲಾಠಿ ಚಾರ್ಜು ಮಾಡಿರುವುದನ್ನು ಮತ್ತು ಅಶ್ರುವಾಯು ಪ್ರಯೊಗಮಾಡಿ 2000ಕ್ಕೂಹೆಚ್ಚು ಕಾರ್ಮಿಕರನ್ನು ಬಂಧಿಸಿ, 500ಕ್ಕೂ ಹೆಚ್ಚು ಕಾರ್ಮಿಕರನ್ನು ಜೈಲಿಗೆ ಕಳುಹಿಸಿದ ಈ ಕೃತ್ಯವನ್ನು ಯೂನಿಯನ್ ತೀವ್ರವಾಗಿ ಖಂಡಿಸುತ್ತದೆ.

ಹಂಚಿನ ಮಜೂರರ ಕೇಳಿಕೆಯನ್ನು ಕೂಡಲೇ ಇತ್ಯರ್ಥ ಮಾಡಬೇಕೆಂದು ಸೌತ ಕೆನರಾ ಪ್ರೆಸ್ ವರ್ಕರ್ಸ್ ಯೂನಿಯನ್ ಸರ್ಕಾರವನ್ನು ಒತ್ತಾಯಿಸುತ್ತದೆ.

ಏರಿಳಿತ ತುಟ್ಟಿ ಭತ್ತೆ ಸಿಗುವವರೆಗೆ ಹೋರಾಟ ಮುಂದುವರಿಸಬೇಕೆಂಬ ಕಾರ್ಮಿಕರ ನಿರ್ಧಾರಕ್ಕೆ ಸಂಪೂರ್ಣ ಬೆಂಬಲ ನೀಡಿ ಅವರ ಹೋರಾಟಕ್ಕೆ ಎಲ್ಲಾ ರೀತಿಯ ಸಹಾಯ ಸಹಕಾರಗಳನ್ನೂ ನೀಡಬೇಕೆಂದು ಎಲ್ಲಾ ಪ್ರೆಸ್ ಕಾರ್ಮಿಕರಿಗೆ ಕರೆ ನೀಡುತ್ತದೆ. ●

ಕೋಣಿ ಗ್ರಾಮ ಮಹಿಳಾ ಮಂಡಲಿ

ಕುಂದಾಪುರ ತಾಲ್ಲೂಕು ಕೋಣಿ ಗ್ರಾಮದ ಮಹಿಳಾ ಮಂಡಲದ ಸಭೆಯು ಕೋಣಿ ಅಂಗನವಾಡಿ ಕೇಂದ್ರದಲ್ಲಿ ಜರುಗಿತು. ಮುಖ್ಯ ಅತಿಥಿಗಳಾದ ಸ್ಥಳೀಯ ಕೋಟೇಶ್ವರ ಮಂಡಲ ಪಂಚಾಯತ್ ಸದಸ್ಯರಾದ ಕೆ.ವೆಂಕಟೇಶ್ ನಾಯಕರವರು ಭಾಗವಹಿಸಿದ್ದರು. ಡಿ.ವೈ.ಎಫ್.ಐ ಕೋಣಿ ಘಟಕದ ಅಧ್ಯಕ್ಷರಾದ ಕೆ.ಎಸ್. ಸಂಜೀವ್‌ರವರು ಸಭೆಯಲ್ಲಿ ಹಾಜರಿದ್ದರು. ಮಹಿಳಾ ಮಂಡಲದ ಚಟುವಟಿಕೆಯ ವರದಿಯನ್ನು ಕಾರ್ಯದರ್ಶಿ ಕೆ. ಸುಲೋಚನರವರು ಸಭೆಗೆವಿವರಿಸಿದರು.

ಮಹಿಳೆಯರು ತಮ್ಮ ಮೇಲೆ ನಡೆಯುವ ಶೋಷಣೆ, ದಬ್ಬಾಳಿಕೆ ಹಾಗೂ ಅತ್ಯಾಚಾರದ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕೆಂದು ಮುಖ್ಯ ಅತಿಥಿ ಕೆ. ವೆಂಕಟೇಶ್ ನಾಯಕ್‌ರವರು ಕರೆ ಇತ್ತರು.

ಸಭೆಯ ಪ್ರಾರಂಭದಲ್ಲಿ ಮಹಿಳಾ ಮಂಡಲದ ಅಧ್ಯಕ್ಷ ಜ್ಯೋತಿ ಎಸ್. ರಾವ್. ಸ್ವಾಗತಿಸಿದರು. ಮೇಲ್ ಕಟ್ಟೇರಿ ಅಂಗನವಾಡಿ ಕಾರ್ಯಕರ್ತೆ ಶ್ಯಾಮಲಾರವರು ಸಭೆಗೆವಂದಿಸಿದರರು.

○

ಮಿನರ್ವ ಮಿಲ್ ಕಾರ್ಮಿಕರ ಮೇಲೆ ಗುಂಡಿನ ಧಾಳಿ

ಕೇಂದ್ರ ಸರ್ಕಾರದ ಹೊಸಆರ್ಥಿಕ ನೀತಿಯ ಒಂದು ಅಂಗವಾದ ಹೊಸ ಜವಳಿ ನೀತಿಯ ಫಲವಾಗಿ, ಬೆಂಗಳೂರಿನ ಮಿನರ್ವ ಮಿಲ್ಸ್‌ನಲ್ಲಿ ಆಧುನೀಕರಣ ಪ್ರಾರಂಭಗೊಂಡಿದೆ. ಇದರ ದರಿಣಾಮವಾಗಿ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕುವ ಕಾರ್ಯ ಪ್ರಾರಂಭಗೊಳ್ಳುತ್ತಿದೆ. ಇದನ್ನು ವಿರೋಧಿಸಿ ಸಿ.ಐ.ಟಿ.ಯು.ಗೆ ಸೇರಿದ ಸೇರಿದ ಕಾರ್ಮಿಕರ ಸಂಘ ಪ್ರಬಲ ಆಡಳಿತ ವರ್ಗದ ಕೈಗೊಂಬೆ ಸಂಘವು ಮಾಡಿಕೊಂಡಿರುವ ಅಕ್ರಮ ಒಪ್ಪಂದವನ್ನು ಪ್ರತಿಭಟಿಸಿ ಸಿ.ಐ.ಟಿ.ಯು ಸಂಘ ನಡೆಸುತ್ತಿರುವ ಚಳುವಳಿಯನ್ನು ಮುರಿಯಲು ಆಡಳಿತ ವರ್ಗ ಸಂಘದ ಮೂವರು ಪಧಾಧಿಕಾರಿಗಳನ್ನು ಸಸ್ಪೆಂಡ್ ಮಾಡಿತು. ಇದಕ್ಕೆ ಮೊದಲು ಮಾರ್ಚ್ 4ರಂದು ಮುಖ್ಯಮಂತ್ರಿಯವರಿಗೆ ಮನವಿ ಪತ್ರ ಅರ್ಪಿಸಿ 6.2.85ರ ಒಪ್ಪಂದವನ್ನು ಉಲ್ಲಂಘಿಸಿರುವುದನ್ನು ತಿಳಿಸಲಾಗಿತ್ತು. ಇದಾದ ಕೂಡಲೇ ಮಾರ್ಚ್ 10ರಂದು ಆಡಳಿತ ವರ್ಗ 85 ನೌಕರರನ್ನು ವಜಾ ಮಾಡಿದೆ. ಮಾರ್ಚ್ 18ರಂದು ಮಧ್ಯಾಹ್ನ ಸಂಘದ ಮುಖಂಡರು ಮತ್ತು ಕಾರ್ಮಿಕರು ಕಾರ್ಖಾನೆಯ ಪರ್ಸನಲ ಮ್ಯಾನೇಜರ್ ಬಳಿ ತೆರಳಿ ಅವಮಾನತ್ತು ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂದು ಧರಣಿ ಸತ್ಯಾಗ್ರಹವನ್ನು ಶಾಂತಿಯುತವಾಗಿ ನಡೆಸಿದಾಗ ಪರ್ಸನಲ್ ಮ್ಯಾನೇಜರ್ ಯಾವುದೇ ಮುನ್ನೆಚ್ಚರಿಕೆ ನೀಡದೆ ಕಾರ್ಮಿಕರ ಮೇಲೆ ತಮ್ಮ ಬಳಿ ಇದ್ದ ಪಿಸ್ತೂಲಿನಿಂದ ಗುಂಡು ಹಾರಿಸಿದರು. ಇದರಿಂದ ಮೂವರು ಕಾರ್ಮಿಕರಿಗೆ ಗಾಯಗಳುಂಟಾಗಿದೆ. ಇಷ್ಟಾದರೂ ಕೂಡ ಕಾರ್ಮಿಕರು ರೊಚ್ಚಿಗೇಳದೆ ತಾಳ್ಮೆಯಿಂದ ಪೋಲೀಸರು ಬರುವವರೆಗೆ ಧರಣಿ ನಡೆಸಿದ್ದು ಒಂದು ವಿಶೇಷ. ಪೋಲೀಸರು ಪರ್ಸನಲ್ ಮ್ಯಾನೇಜರ್ ಅವರನ್ನು ಬಂಧಿಸಿ ಕೊಲೆ ಪ್ರಯತ್ನದ ಮೊಕದ್ದಮೆ ದಾಖಲು ಮಾಡಿಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಿದರು ಆದರೆ ಕಾರ್ಮಿಕರ ಮೇಲೆ 13 ಸುಳ್ಳು ಆರೋಪಗಳನ್ನು ಹೊರಿಸಿ ಬಂಧನದಲ್ಲಿಡಲಾಗಿತ್ತು. ಮೇಲ್ಕಂಡ ಘಟನೆಯನ್ನು ಪ್ರತಿ ಭಟಿಸಿ ಕಾಖಾನೆಯ ಎಲ್ಲಾ ಕಾರ್ಮಿಕರೂ 3 ಗಂಟೆಗಳ ಕಾಲ ಮುಷ್ಕರ ನಡೆಸಿದ್ದಾರೆ. 12, ಮಂದಿ ಬಂಧಿತ ಕಾರ್ಮಿಕರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಕಾರ್ಮಿಕರು ಮಾ. 20 ರಂದು ಮೆರವಣಿಗೆ ನಡೆಸಿ ಕಾರ್ಮಿಕ ಸಚಿವರಾದ ಶ್ರೀ ಬೊಮ್ಮಾಯಿ ಮತ್ತು ಗೃಹ ಸಚಿವರಾದ ಶ್ರೀ ರಾಚಯ್ಯ ಅವರುಗಳಿಗೆ ಮನವಿ ಸಲ್ಲಿಸಿದ್ದಾರೆ. ಅಲ್ಲದೆ ಇದೇ ಘಟನೆಯನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಶಾಂತಿದಳವೋ ಗೂಢಚರ್ಯೆಯೋ ?

ಜಗತ್ತಿನ ವಿವಿಧ ಭಾಗಗಳಲ್ಲಿ ಶಾಂತಿ ಕಾಪಾಡಲು ಅಮೆರಿಕಾದ ಸರ್ಕಾರ ನೇಮಿಸಿರುವ ಶಾಂತಿ ದಳಗಳಸಿಬ್ಬಂದಿಯ ಸಂಖ್ಯೆ 1990ವೇಳೆಗೆ ಸುಮಾರು 10,000ಕ್ಕೆ ತಲುಪಲಿದೆ. ಪ್ರಸಕ್ತ ವರ್ಷದಲ್ಲಿ ಅವುಗಳ ನಿರ್ವಹಣೆಗಾಗಿ ಸರ್ಕಾರ 130 ಮಿಲಿಯ ಡಾಲರ್‌ವೆಚ್ಚಮಾಡಲಿದೆ. ಶಾಂತಿದಳಗಳು ಮುಖ್ಯಸ್ಥರ ಪ್ರಧಾನ ಕರ್ತವ್ಯ "ಕಮ್ಯೂನಿಸ್ಟ್ ಸಿದ್ಧಾಂತ" ವನ್ನು ವಿರೋಧಿಸುವುದೇ ಆಗಿತ್ತು. ಕಳೆದ 25 ವರ್ಷಗಳ ಅವಧಿಯಲ್ಲಿ ಶಾಂತಿದಳಗಳು ಆಫ್ರಿಕಾ, ಏಶಿಯಾ, ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳಿಗೆ 120,000 ಸ್ವಯಂ ಸೇವಕರನ್ನು ಕಳುಹಿಸಿ. ಸ್ವಯಂ ಸೇವಕರು ಈ ರಾಷ್ಟ್ರಗಳ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸುವ ಬದಲು ಕಮ್ಯುನಿಸ್ಟ್ ವಿರೋಧಿ ವಿಚಾರಗಳನ್ನು ಜನಮನದಲ್ಲಿ ಬಿತ್ತುವ ಕೆಲಸವನ್ನು ಭರದಿಂದ ಕೈಗೊಂಡರು ಅಮೆರಿಕಾದ ಆಡಳಿತಕ್ಕೆ ಇಷ್ಟವಾಗದ ನೀತಿಗಳನ್ನು ಅನುಸರಿಸುವ ರಾಷ್ಟ್ರಗಳಿಂದ ಗೂಢಚರ್ಯೆ ಮಾಹಿತಿಗಳನ್ನು ಸಂಗ್ರಹಿಸಲು ಬುಡಮೇಲು ಕೃತ್ಯಗಳನ್ನು ಕೈಗೊಳ್ಳಲು ಸಿಐಎ ಈ ಶಾಂತಿದಳಗಳ ಸೇವೆಯನ್ನು ಬಳಸಿಕೊಂಡ ಪ್ರಕರಣಗಳೂ ಇವೆ. ಆದುದರಿಂದಲೇ ಇತ್ತೀಚೆಗೆ ಸುಮಾರು 30 ರಾಷ್ಟ್ರಗಳು ಶಾಂತಿದಳಗಳ "ಮಾನವೀಯತೆ ಸೇವೆ" ತಮಗೆ ಬೇಕಿಲ್ಲ ಎಂದು ಖಂಡತುಂಡವಾಗಿ ನಿರಾಕರಿಸಿವೆ.

ಭಗತ್‌ಸಿಂಗ್

[2ನೇ ಪುಟದಿಂದ]

ನೆ ಎದುರಿಸುತ್ತಿದ್ದ ಭಗತ್‌ಸಿಂಗ್, ರಾಜ ಗುರು ಮತ್ತು ಸುಖದೇವ್ ತಮ್ಮನ್ನು ಗಲ್ಲಿಗೇರಿಸುವ ಕೆಲವೇ ದಿನಗಳಲ್ಲಿ ಮೊದಲು ಪಂಜಾಬಿನ ಗವರ್ನರ್‌ಗೆ ಪತ್ರ ಬರೆದು ತಾವು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಯುದ್ಧ ಹೂಡಿದ ಅಪರಾಧಕ್ಕಾಗಿ ಮರಣದಂಡನೆಗೀಡಾಗಿದ್ದೇವೆಂದೂ ಬ್ರಿಟಿಷ್ ಸರಕಾರದ ನ್ಯಾಯಾಲಯದ ತೀರ್ಪುಸತ್ಯವೇ ಆಗಿದ್ದರೆ ತಮ್ಮ ಯುದ್ಧಾಪರಾಧಿಗಳಾಗಿ ಪರಿಗಣಿಸಿ ನೇಣುಗಂಬಕ್ಕೆ ಏರಿಸದೆ ಗುಂಡೇಟಿನಿಂದ ಸಾಯಿಸಬೇಕೆಂದೂ ಕೇಳಿಕೊಂಡಿದ್ದರು. ಕ್ರಾಂತಿಕಾರಿಗಳು ಸಾವಿನ ಕ್ಷಣದಲ್ಲೂ ಬುದ್ಧಿಸ್ಥಿಮಿತ ಕಳೆಕೊಳ್ಳದೆ ತರ್ಕಬದ್ಧವಾಗಿ ಹೇಗೆ ಯೋಚಿಸಿದರೆಂಬುದಕ್ಕೆ ಇದೊಂದೇ ಉದಾಹರಣೆ ಸಾಕು.

ಭಾರತ ದೇಶವು ಇಂದು ಸಾಮ್ರಾಜ್ಯಶಾಹಿ ಪಿತೂರಿಗೊಳಗಾಗಿ ಅದರ ಸ್ವಾತಂತ್ರ್ಯ ಮತ್ತು ಐಕ್ಯತೆ ಗಂಡಾಂತರದಲ್ಲಿರುವ ಈ ಸಂದರ್ಭದಲ್ಲಿ ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳ ಧೀರೋದಾತ್ತ ಹೋರಾಟ ಬಲಿದಾನಗಳು ದೇಶದ ಐಕ್ಯತೆಗಾಗಿ ಮತ್ತು ಶೋಷಣೆಯಿಂದ ವಿಮುಕ್ತವಾದ ಸಮಾಜವೊಂದರ ರಚನೆಗಾಗಿ ನಾವು ನಡೆಸುವ ಹೋರಾಟದಲ್ಲಿ ನಮಗೆ ಚೈತನ್ಯ ನೀಡಲಿ.

○

ಒರಿಸ್ಸಾ : ವಿಚ್ಛಿದ್ರಕಾರಿ ಶಕ್ತಿಗಳ ಆಟಾಟೋಪ

ಒರಿಸ್ಸಾದಲ್ಲಿ ಕೋಮುವಾದಿ, ವಿಚ್ಛಿದ್ರಕಾರಿ ಶಕ್ತಿಗಳು ಇತ್ತೀಚೆಗೆ ವಿಪರೀತ ವ್ಯವಸ್ಥಿತ ರೀತಿಯಲ್ಲಿ ಸಕ್ರಿಯವಾಗಿವೆ. ಆರ್.ಎಸ್.ಎಸ್ ಮತ್ತು ವಿಶ್ವ ಹಿಂದೂ ಪರಿಷತ್‌ಗಳಲ್ಲದೆ, ಹಿಂದೂ ಜಾಗರನ್ ಸಮುಕ್ಷಯ, ಹಿಂದೂ ಸುರಕ್ಷಾ ಸಮಿತಿ, ಹಳ್ಳಿಯ ಹಂತದ ಸಂಕೀರ್ತನ ಗುಂಪುಗಳು ಜಾತ್ಯತೀತತೆಗೆ ರಾಜ್ಯದಲ್ಲಿ ತೀವ್ರ ಸವಾಲು ಹಾಕಿವೆ.

ಫುಲ್‌ಬನಿ ಜಿಲ್ಲೆಯಲ್ಲಿ ಹರಿಜನ ಮತ್ತು ಆದಿವಾಸಿಗಳ ಮತಾಂತರ [ಕ್ರಿಶ್ಚಿಯನ್ ಧರ್ಮಕ್ಕೆ] ದ ವಿರುದ್ಧ ಪ್ರಚಾರ ಮತ್ತು ಪುನಃ ಮತಾಂತರಕ್ಕೆ ಆರ್.ಎಸ್.ಎಸ್. ಮತ್ತು ಪರಿಷತ್‌ನ ಪ್ರಯತ್ನಗಳು ಕೋಮುವಾದಿ ಗಲಭೆಗಳಿಗೆ ದಾರಿಮಾಡಿಕೊಟ್ಟಿದೆ. ಈ ಉದ್ದೇಶಕ್ಕಾಗಿ ಚಕಪಾಡು ಎಂಬಲ್ಲಿ ಒಂದು ಆಶ್ರಮ ತೆರೆಯಲಾಗಿದೆ. ಇಂತಹ ಪುನಃ ಮತಾಂತರದ ಕಾರ್ಯಕ್ರಮಗಳಲ್ಲಿ ಕೋಮುವಾದಿ ಘೋಷಣೆಗಳನ್ನು ಕೂಗಲಾಗುತ್ತದೆ. ಒಂದು ತಿಂಗಳ ಒಳಗೆ ಹಿಂದೂ-ಕ್ರಿಶ್ಚಿಯನ್ ಕೋಮು ಗಲಭೆಗಳು ನಡೆದವು ರಾಜ್ಯದ ಆಡಳಿತ ಇದನ್ನು ತಡೆಯಲು ವಿಫಲವಾಗಿದೆ. ರಾಜ್ಯಪಾಲರೇ ಆಶ್ರಮದ ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಬೆರಹಾಮಪುರ ಎಂಬಲ್ಲಿ ಜಗನ್ನಾಥನ ರಥೋತ್ಸವವನ್ನು ಹೊಸತಾಗಿ ನಡೆಸಿ ಈ ಸಂದರ್ಭವನ್ನು ಹಿಂದೂ ಕೋಮುವಾದಿಗಳು ಕ್ರಿಶ್ಚಿಯನ್ ವಿರೋಧಿ ಕೋಮು ಪ್ರಚಾರಕ್ಕೆ ಬಳಸಿಕೊಂಡರು. ರಥೋತ್ಸವ ಚರ್ಚಿನ ಮಾರ್ಗವಾಗಿ ಹೋಗುವುದನ್ನು SDO ನಿಷೇಧಿಸಿದರೂ, ಈ ಆಜ್ಞೆಯನ್ನು ಉಲ್ಲಂಘಿಸಲಾಯಿತು. ಅಲ್ಲದೆ SDO ಮನೆ, ಚರ್ಚುಗಳು ಮತ್ತು ಕ್ರಿಶ್ಚಿಯನ್ನರ ಮನೆಗಳಿಗೆ ಧಾಳಿ ನಡೆಸಲಾಯಿತು. ರಾಜ್ಯದ ಆಡಳಿತ ಜಿಲ್ಲಾ ಕಲೆಕ್ಟರ್ ಮೂಲಕ SDO ಕೋಮುವಾದಿಗಳಿಗೆ ತಪ್ಪೊಪ್ಪಿಗೆ ಒಪ್ಪಿಸಲು ಆದೇಶ ನೀಡಿತು. ರಾಜ್ಯದ ಆಡಳಿತವನ್ನು ಈ ರೀತಿ ನಿರ್ಣಯಗೊಳಿಸಿದ ನಂತರ ಜಿಲ್ಲೆಯ ಆರು ಚರ್ಚುಗಳಿಗೆ ಬೆಂಕಿ ಇಡಲಾಯಿತು. ಕ್ರಿಶ್ಚಿಯನ್ನರು ರಾಜ್ಯಪಾಲರನ್ನು ರಕ್ಷಣೆಗೆ ಮೊರೆಹೋಗಿದ್ದಾರೆ. ಕೋಮುವಾದಿ ಶಕ್ತಿಗಳು ಸರ್ಕಾರ ಮತ್ತು ಆಡಳಿತದ ಅಳಿದುಳಿದ ಜಾತ್ಯತೀತತೆಗೆ ಸವಾಲು ಒಡ್ಡಲು ರಥೋತ್ಸವ ಮುಂತಾದ ಕಾರ್ಯಕ್ರಮಗಳಿಂದ ಜನಾಭಿಪ್ರಾಯ ರೂಪಿಸಲು ಪ್ರಯತ್ನಿಸಿ ಸಫಲರಾಗಿದ್ದಾರೆ.

ಜಾರ್ಖಂಡ್ ಮುಕ್ತಿ ಮೋರ್ಚಾ 'ಜಾರ್ಖಂಡ್ ರಾಜ್ಯ'ಕ್ಕೆ ಕರೆ ನೀಡಿ ಜನವರಿ 26ಕ್ಕೆ ಬಂದ್‌ಗೆ ಕರೆ ಕೊಟ್ಟಿತ್ತು. ಮಯೂರ್ ಭಂಜ್ ಜಿಲ್ಲೆಯಲ್ಲಿ ಮಾತ್ರ ಅಂಶಿಕವಾಗಿ ಬಂದ್ ನಡೆಯಿತು. ಜಾರ್ಖಂಡ್ ಪ್ರತ್ಯೇಕವಾದಿ ನಾಯಕರು ಸಾರ್ವಜನಿಕ ಕ್ಷೇತ್ರದ SAIL ನ ಅತಿಥಿ ಗೃಹದಲ್ಲಿ ತಂಗಿ, SAIL ನ ಕಾರ್ಮಿಕರ ಮಧ್ಯೆ ಜಾರ್ಖಂಡ್ ಪ್ರತ್ಯೇಕತಾವಾದ ಪ್ರಚಾರ ಮಾಡುವ ಪ್ರಯತ್ನ ಮಾಡಿದರೂ ಚರ್ಚ್‌ಗಳೂ ಈ ಪ್ರಚಾರದಲ್ಲಿ ಇವರಿಗೆ ಸಹಾಯ ಮಾಡುತ್ತಿವೆ. CITU ನೇತೃತ್ವದಲ್ಲಿ ಸಂಘಟಿತರಾಗಿರುವ ಆದಿವಾಸಿ ಕಾರ್ಮಿಕರು ಈ ಪ್ರಯತ್ನವನ್ನು ವಿಫಲಗೊಳಿಸಿದ್ದಲ್ಲದೆ SAIL ಆಡಳಿತಕ್ಕೆ ಪ್ರತಿಭಟನೆ ಸಲ್ಲಿಸಿದ್ದಾರೆ.

ಕಟ್ಟಕ್ ಜಿಲ್ಲೆಯ ಜೌರಿ ಎಂಬಲ್ಲಿ ಹರಿಜನ ಮತ್ತು ಕ್ಷತ್ರಿಯ ಜಾತಿ ಖಂಡಾಯತ್‌ಗಳ ನಡುವೆ ತೀವ್ರ ಕೋಮು ಗಲಭೆ ನಡೆದು 3 ಹರಿಜನ ಮತ್ತು ಒಬ್ಬ ಖಂಡಾಯತ್ ಕೊಲ್ಲಲ್ಪಟ್ಟರು. ಹರಿಜನ ರಿಕ್ಷಾ ಚಾಲಕನೊಬ್ಬ ಖಂಡಾಯತ್ ಹುಡುಗಿಯನ್ನು ಅಪಹರಿಸಿದ್ದ ಎಂಬ ವದಂತಿಯಿಂದ ಗಲಭೆ ಆರಂಭವಾಯಿತು. ಇದರ ನಂತರ ಜಾತಿ ಆಧಾರದ ಮೇಲೆ ಸಂಘಟನೆಗಳು ಆರಂಭವಾಗಿದ್ದು ಕೋಮು ಪರಿಸ್ಥಿತಿ ಬಿಗಡಾಯಿಸಿದೆ. ಕಾಂಗ್ರೆಸ್(ಐ), ಜನತಾ ನಾಯಕರು ಈ ಸಂಘಟನೆಗಳಲ್ಲಿ ಸಕ್ರಿಯವಾಗಿದ್ದಾರೆ.

ಕರಾವಳಿ ಜಿಲ್ಲೆಗಳಾದ ಬಾಲಸೋರ್, ಕಟ್ಟಕ್ ಮತ್ತು ಪುರಿ ಜಿಲ್ಲೆಗಳಲ್ಲಿ ಹಲವು ದಶಕಗಳಿಂದ ವಾಸವಾಗಿರುವ ಬಂಗಾಳಿಗಳನ್ನು ರಾಜ್ಯದಿಂದ ಹೊರ ಹಾಕಬೇಕೆಂಬ ಕೂಗು ಇತ್ತೀಚೆಗೆ ಕೇಳಿಬರುತ್ತಿದೆ. ಬಿ.ಜೆ.ಪಿ ಮತ್ತು ಒಂದು ಸ್ಥಳೀಯ ದಿನಪತ್ರಿಕೆ ಈ ಕೂಗು ಎಬ್ಬಿಸುತ್ತಿವೆ.

ವಿಚ್ಛಿದ್ರಕಾರಿ ಶಕ್ತಿಗಳ ಆಟಾಟೋಪ ತಡೆಯಲು ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಸಿ.ಪಿ.ಐ ಮತ್ತು ಸಂದಿನಿ ಸತ್ಪಥಿಯವರ ನಾಯಕತ್ವದ ಜಾಗೃತ ಒರಿಸ್ಸಾ ಜತೆ ಜಂಟಿ-ಪ್ರಚಾರ ಕಾರ್ಯಕ್ರಮ ಹಾಕಿಕೊಂಡಿದೆ. ಬೆಹ್ರಾಂಪುರದಲ್ಲಿ ನಡೆದ ಇಂತಹ ಜಂಟಿ ಸಭೆಗೆ ಆರ್.ಎಸ್.ಎಸ್. ಗೂಂಡಾಗಳು ಬಾಂಬ್ ದಾಳಿ ನಡೆಸಿದರು, ಇದನ್ನು ಧೈರ್ಯದಿಂದ ಎದುರಿಸಿ ಇನ್ನೂ ಹಲವು ಸಭೆಗಳು ನಡೆದಿವೆ. ಕಾಂಗ್ರೆಸ್ (ಐ), ಜನತಾ ನಾಯಕರು ಈ ಪ್ರಚಾರದಲ್ಲಿ ಭಾಗವಹಿಸದೆ ತಮ್ಮ ಸಂದರ್ಭ ಸಾಧಕ ನೀತಿಯನ್ನು ಪ್ರದರ್ಶಿಸಿದ್ದಾರೆ.

ಪಂಜಾಬ್

ಪಂಜಾಬ್‌ನ ಕೃಷಿ ಕಾರ್ಮಿಕರ ಸಂಘಟನೆ ಪಂಜಾಬ್ ದೆಹಾತಿ ಮಜದೂರ್ ಸಭಾ ತನ್ನ 18ನೇ ರಾಜ್ಯ ಸಮ್ಮೇಳನವನ್ನು ಮಾರ್ಚ್ 2,3,4 ರಂದು ಲುಧಿಯಾನ ಜಿಲ್ಲೆಯ ಜಾಗರನ್ ಪಟ್ಟಣದಲ್ಲಿ ಯಶಸ್ವಿಯಾಗಿ ನಡೆಸಿತು. 15000 ಕೃಷಿ ಕಾರ್ಮಿಕರ ರ್‍ಯಾಲಿಯಿಂದ ಆರಂಭವಾದ ಸಮ್ಮೇಳನ ಅದೇ ಪಟ್ಟಣದಲ್ಲಿ ಭಯೋತ್ಪಾದಕರು ಪ್ರಬಲರಾಗಿರುವ ಅಮೃತಸರ, ಗುರದಾಸ್‌ಪುರ ಜಿಲ್ಲೆಗಳಿಂದ ಖಲಿಸ್ತಾನ-ವಿರೋಧಿ ಘೋಷಣೆಗಳನ್ನು ಕೂಗುತ್ತಾ ಕೃಷಿ ಕಾರ್ಮಿಕರು ಸಮ್ಮೇಳನದಲ್ಲಿ ಭಾಗವಹಿಸಿದರು. ಕೃಷಿ ಕಾರ್ಮಿಕರ ಕಾರ್ಮಿಕ-ರೈತ ಐಕ್ಯತೆಯ ಸಮಸ್ಯೆಗಳನ್ನು ರಾಜ್ಯದ ವಿಶಿಷ್ಟ ಸಂದರ್ಭದಲ್ಲಿ ವಿಶ್ಲೇಷಿಸುವುದಲ್ಲದೆ ಸಮ್ಮೇಳನ ಕೋಮು ಸೌಹಾರ್ದತೆಗೆ ಒಂದು ರ್‍ಯಾಲಿ ತೆಗೆಯಿತು. ಸಮ್ಮೇಳನ DS4 ಎಂಬ ಅಪಾಯಕಾರಿ ಖಲಿಸ್ತಾನ-ಪರ, ಸಾಮ್ರಾಜ್ಯಶಾಹಿ-ಪರ ಸಂಘಟನೆಯ ಬಗ್ಗೆ ಹರಿಜನ, ಆದಿವಾಸಿ ಕೃಷಿ ಕಾರ್ಮಿಕರನ್ನು ವಿಶೇಷವಾಗಿ ಎಚ್ಚರಿಸಿತು.

ಬಿಹಾರ್ : ಕಾಂಗ್ರೆಸ್ ಮಾದರಿ ಜಾತ್ಯತೀತತೆ

ಈ ವರೆಗೆ ಧಾರ್ಮಿಕ ಆಚರಣೆಗಳಿಂದ ಉದ್ಘಾಟನೆಗೆ ಸೀಮಿತವಾಗಿದ್ದದ್ದು, ಒಂದು ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಯಲ್ಲಿ 10 ದಿನಗಳ 'ಮಹಾರುದ್ರ ಯಜ್ಞ' ಸಂಪೂರ್ಣವಾಗಿ ಕಾರ್ಖಾನೆಯ ಖರ್ಚಿನಲ್ಲಿ ನಡೆಸುವವರೆಗೆ ಕಾಂಗ್ರೆಸ್‌ಮಾದರಿ 'ಜಾತ್ಯತೀತತೆ' ತಲುಪಿದೆ. ಬಿಹಾರದ ಹಜಾರಿಬಾಗ್ ಜಿಲ್ಲೆಯಲ್ಲಿರುವ ಇಂಡಿಯಾ ಫೈರ್ ಬ್ರಿಕ್ಸ್ ಇನ್ಸುಲೇಶನ್ ಕಂಪನಿ ಈ ಕಾರ್ಖಾನೆ ಫೆಬ್ರುವರಿ 16, 26ರವರೆಗೆ ನಡೆಸಿದ ಈ ಯಜ್ಞದಲ್ಲಿ ಕಾರ್ಖಾನೆಯ ಹಣವಲ್ಲದೆ, ಕಾರ್ಮಿಕರಿಂದ ಬಲತ್ಕಾರವಾಗಿ ಒಂದು ದಿನದ ಕೂಲಿಯನ್ನು ಬಳಸಲಾಯಿತು, ಆರ್.ಎಸ್.ಎಸ್. ಮತ್ತು ಪರಿಷತ್‌ನ ಹಲವು ನಾಯಕರು 'ಯಜ್ಞ' ನಡೆಸಿದ್ದಲ್ಲದೆ ಅಲ್ಪಸಂಖ್ಯಾತ-ವಿರೋಧಿ ಭಾಷಣಗಳನ್ನು ಮಾಡಿದರು.

ಬಿಹಾರ್ ಸಿ.ಐ.ಟಿ.ಯು. ರಾಜ್ಯ ಕೇಂದ್ರ ಸರ್ಕಾರಕ್ಕೆ ಈ ವಿಷಯ ತಿಳಿಸಿ ಪತ್ರ ಬರೆದು ಸಿ.ಬಿ.ಐ. ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ. ●

ಸ್ವೀಡನ್ನಿನ ಪ್ರಧಾನಿ ಪಾಮೆಯನ್ನು ಕೊಂದವರು ಯಾರು ?

ಸ್ವೀಡನ್ನಿನ ಜನಪ್ರಿಯ ಪ್ರಧಾನಿ ಒಲೋಫ್ ಪಾಮೆ ಕೊಲೆಯಾಗಿ ಒಂದು ವರ್ಷ ಮೀರಿದೆ ಫೆಬ್ರುವರಿ 28ರಂದು ಚಿತ್ರವೊಂದನ್ನು ನೋಡಿ ಮರಳುತ್ತಿದ್ದಾಗ ಕೊಲೆಪಾತಕನೊಬ್ಬನ ಗುಂಡಿಗೆ ಬಲಿಯಾದರು.

ಕೊಲೆ ಮಾಡಿದವರು ಯಾರು? ಕಾರಣವೇನು? ಅದು ಇನ್ನೂ ವಿಸ್ಮಯವಾಗೇ ಉಳಿದಿದೆ. ಇದಕ್ಕೆ ಹಿಂದೆಯೂ ಹಲವು ನಾಯಕರ ಕೊಲೆಯಾಗಿದೆ. ನಿಜವಾದ ಕೊಲೆಪಾತಕರು ಪತ್ತೆಯಾಗಿಲ್ಲ. ಅವರ ಹಿಂದೆ ಯಾರಿದ್ದರೆಂಬುದೂ ಗೊತ್ತಾಗಿಲ್ಲ. ಇರಾನ್‌ನ ಮೊಸಾದಿಕ್, ಶ್ರೀಲಂಕಾದ ಸಾಲೋಮನ್, ಕಾಂಗೊದ ಲುಮುಂಬಾ, ಬಾಂಗ್ಲಾ ದೇಶದ ಮುಜೀಬುರ್ ಹಾಗೂ ಭಾರತದ ಇಂದಿರಾ ಗಾಂಧಿಯವರ ಸಾಲಿಗೆ ಕಳೆದ ವರ್ಷ ಒಲೋಫ್ ಪಾಮೆ ಸೇರಿದರು. ಈ ಎಲ್ಲಾ ಪ್ರಕರಣಗಳಲ್ಲೂ ಕೊಲೆಯಾದವರು ಸಾಮ್ರಾಜ್ಯಶಾಹೀ ವಿರೋಧಿಗಳಾಗಿದ್ದವರು. ಅವರು ಅಮೇರಿಕಾದ ಅನ್ಯಾಯದ ನೀತಿಗಳನ್ನು ವಿರೋಧಿಸಿದ್ದರು, ಹೊಸ ಅಂತರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ಪ್ರತಿಪಾದಿಸಿದ್ದರು.

1968ರಲ್ಲಿ ಸಚಿವ ಸಂಪುಟದ ಸದಸ್ಯರಾಗಿದ್ದ ಅವರು ಸ್ಟಾಕ್‌ಹೋಮ್‌ನಲ್ಲಿ ಹನೋಯ್ ರಾಯಭಾರಿಯ ಜೊತೆಯಲ್ಲಿ ವಿಯೆಟ್ನಾಂ ಯುದ್ಧದ ವಿರುದ್ಧ ಪಂಜಿನ ಮೆರವಣಿಗೆಯ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಹನೋಯ್ ಮೇಲೆ ಅಮೇರಿಕಾದ ಬಾಂಬು ದಾಳಿಯನ್ನು ಅವರು ಇತಿಹಾಸದಲ್ಲೇ ಎಸಗಿರುವ ಘೋರ ಅಪರಾಧ ಎಂದು ಖಂಡಿಸಿದ್ದರು. ಅವರ ಈ ಹೇಳಿಕೆಯಿಂದ ರೊಚ್ಚಿಗೆದ್ದ ಅಮೇರಿಕಾ ಸ್ಟಾಕ್‌ಹೋಮ್‌ನಿಂದ ತನ್ನ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿತು.

ಫೀಡೆಲ್ ಕ್ಯಾಸ್ಟ್ರೋ ಮತ್ತು ಪಾಮೆ ಒಂದೇ ವೇದಿಕೆಯಲ್ಲಿ ಮಾತನಾಡಿ ಅಮೇರಿಕಾದ ಅಕ್ರಮಗಳನ್ನು ಖಂಡಿಸಿದ್ದರು. ಪಾಮೆ ನಿಕರಾಗುವದ ಸಾಂದಿನಿಸ್ಟಾರ ಸರ್ಕಾರಕ್ಕೆ ಪೂರ್ಣ ಬೆಂಬಲ ನೀಡಿದ್ದರು. ಅವರು ಶಾಂತಿಗೆ ದೃಢಬದ್ಧರಾಗಿದ್ದು, ನ್ಯೂಕ್ಲಿಯರ್ ಶಸ್ತ್ರಗಳ ಪೈಪೋಟಿಯನ್ನು ವಿರೋಧಿಸುತ್ತಿದ್ದರು.

ಹಾಗಾಗಿ, ಸಮಾಜವಾದಿಯಾಗಿದ್ದ ಒಲೋಫ್ ಪಾಮೆ ಅಮೇರಿಕಾದ ಆಡಳಿತಗಾರರಿಗೆ ಬೇಡದ ವ್ಯಕ್ತಿಯಾಗಿದ್ದರು. ಅವರ ಕೊಲೆಯಾಯಿತು, ಆದರೆ ಕೊಲೆಪಾತಕ ಮಾತ್ರ ಇನ್ನೂ ಪತ್ತೆಯಾಗಿಲ್ಲ.

"ಒಲೋಫ್ ಪಾಮೆಯನ್ನು ಕೊಂದವರು ಯಾರು"? ಇದು ಸೋವಿಯೆತ್ ಟಿ.ವಿ. ಚಿತ್ರವೊಂದರ ಶೀರ್ಷಿಕೆ. ಐವತ್ತು ನಿಮಿಷಗಳ ಈ ಚಿತ್ರ ಪಾಮೆಯ ಕೊಲೆ ಸಿ.ಐ.ಎ. ಅಥವಾ ಅಂತರರಾಷ್ಟ್ರೀಯ ಪ್ರತಿಗಾಮಿಗಳ ಕುತಂತ್ರದಿಂದ ನಡೆದದ್ದು ಎಂದು ಸಾಬೀತು ಮಾಡುತ್ತದೆ. ಅದನ್ನು ಸೋವಿಯತ್ ಟಿ.ವಿ.ಯಲ್ಲಿ ಪ್ರದರ್ಶಿಸಲಾಗಿದೆ. ಈಗ ಆ ಚಿತ್ರವನ್ನು ಸ್ವೀಡನ್ನಿನ ಟಿ.ವಿ. ಸಂಸ್ಥೆಯೊಂದು ಪ್ರದರ್ಶನಕ್ಕಾಗಿ ಪಡೆದುಕೊಂಡಿದೆ.

ಆದರೆ ಅಮೇರಿಕಾದ ರಾಯಭಾರಿ ವರ್ಗದವರು ಈ ಪ್ರದರ್ಶನವನ್ನು ತಡೆಯಲು ಪ್ರಯತ್ನಿಸುತ್ತಿದ್ದಾರೆ. ಸ್ವೀಡನ್ನಿನ ಟಿ.ವಿ. ನಿರ್ದೇಶಕರನ್ನು ಅಮೇರಿಕಾದ ರಾಯಭಾರಿ ಕಛೇರಿಯವರು ಭೇಟಿಯಾಗಿ ಪ್ರದರ್ಶನ ನಿಲ್ಲಿಸುವಂತೆ ಒತ್ತಾಯಪಡಿಸಿದ್ದಾರೆ. ಸ್ವೀಡನ್ನಿನ ಟಿ.ವಿ. ನಿರ್ದೇಶಕ ಓಲೆಬೆ ರುಗ್ಗಾಲ್ಡ್ "ಅಮೇರಿಕಾದ ರಾಯಭಾರಿ ವರ್ಗದವರು ನಮ್ಮಲ್ಲಿಗೆ ಬಂದಿದ್ದು ಒಂದು ಅಪೂರ್ವ ಘಟನೆ. ಹಿಂದೆಂದೂ ಇಂಥದ್ದು ಸಂಭವಿಸಿರಲಿಲ್ಲ, ಪಾಶ್ಚಾತ್ಯ ದೇಶಗಳ ಯಾವ ಪ್ರತಿನಿಧಿಗಳೂ ನಿಗದಿಯಾದ ಪ್ರಸಾರವನ್ನು ನಿಲ್ಲಿಸುವಂತೆ ಕೇಳಿಲ್ಲ" ಎಂದು ಹೇಳಿದ್ದಾರೆ.

ಅಮೇರಿಕಾದ ರಾಯಭಾರಿ ವರ್ಗದವರ ಈ ನಡವಳಿಕೆ ಹಲವು ಸಂದೇಹಗಳಿಗೆ ಎಡೆಕೊಟ್ಟಿದೆ. ಟಿ.ವಿ. ಚಿತ್ರದ ಬಗ್ಗೆ ಅಮೇರಿಕಾಗೆ ಏಕೆ ಅಳುಕು ಎಂಬುದೇ ಮುಖ್ಯ ಪ್ರಶ್ನೆ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎಂಬ ಹಾಗಾಗಿದೆ ಅಮೇರಿಕಾಗೆ. ○

ಪಾಕ್ ಅಣುಬಾಂಬಿಗೆ ಪಾಶ್ಚಾತ್ಯ ರಾಷ್ಟ್ರಗಳಿಂದ ಪೂರ್ಣ ಸಹಕಾರ

ಪಾಕಿಸ್ತಾನವು ಅಣುಬಾಂಬ್ ನಿರ್ಮಿಸಲು ಪಾಶ್ಚಾತ್ಯ ರಾಷ್ಟ್ರಗಳಿಂದ ಪಡೆದಿರುವ ನೆರವು ಅಲ್ಪವೇನಲ್ಲ. ಅಮೇರಿಕವು ಪಾಕ್ ಅಣುಬಾಂಬ್‌ಗೆ ಅಗತ್ಯವಾದ ರೇಡಿಯೋ ಇಲೆಕ್ಟ್ರಾನಿಕ್ ಸಾಧನಗಳನ್ನು ಒದಗಿಸಿದೆ. ನ್ಯೂಕ್ಲಿಯರ್ ತಂತ್ರಜ್ಞಾನವನ್ನು ಪಾಕಿಸ್ತಾನಕ್ಕೆ ಒದಗಿಸಲು ಅಮೇರಿಕ ಎಳ್ಳಷ್ಟೂ ಹಿಂದೆ ಮುಂದೆ ನೋಡಿಲ್ಲ.

ನೆದರ್‌ಲ್ಯಾಂಡ್ಸ್, ಪಶ್ಚಿಮ ಜರ್ಮನಿ, ಬೆಲ್ಜಿಯಂ, ಬ್ರಿಟನ್, ಇಟಲಿ ಮತ್ತು ಪಶ್ಚಿಮ ಯೂರೋಪ್‌ನ ಇನ್ನೂ ಕೆಲವು ರಾಷ್ಟ್ರಗಳು ಪಾಕಿಸ್ತಾನದ ನ್ಯೂಕ್ಲಿಯರ್ ಆಕಾಂಕ್ಷೆಗಳನ್ನು ಈಡೇರಿಸಲು ಅಗತ್ಯವಾದ ಸಾಧನ ಸಲಕರಣೆಗಳನ್ನು ಒದಗಿಸಿವೆ.

ಪಾಕಿಸ್ತಾನವು ನ್ಯೂಕ್ಲಿಯರ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದರೊಂದಿಗೆ, ಪಾಶ್ಚಾತ್ಯ ಗುತ್ತೇದಾರಿ ಸಂಸ್ಥೆಗಳ ಸಹಕಾರದಿಂದ ರಸಾಯನಿಕ ಅಸ್ತ್ರಗಳ ಉತ್ಪಾದನೆಗೂ ತೊಡಗಿದೆ.

ದೇಶವು ಆರ್ಥಿಕ ಸಂಕಷ್ಟಗಳನ್ನೆದುರಿಸುತ್ತಿದ್ದರೂ ಪಾಕಿಸ್ತಾನದ ಆಡಳಿತ ಅದನ್ನು ಕಡೆಗಣಿಸಿ ಮಿಲಿಟರಿ ಸಿದ್ಧತೆಗಳಲ್ಲಿ ತೊಡಗಿದೆ. ಪಾಕಿಸ್ತಾನದಲ್ಲಿ ಗ್ರಾಹಕರ ಅವಶ್ಯಕ ವಸ್ತುಗಳ ಬೆಲೆಗಳು ವರ್ಷದಲ್ಲಿ ಶೇಕಡಾ 30 ರಷ್ಟು ಹೆಚ್ಚುತ್ತಿವೆ. ಕೃಷಿ ಉತ್ಪಾದನೆ ಕುಸಿಯುತ್ತಿದೆ. ವಿದೇಶಿ ಬಂಡವಾಳ ನಿರಂತರ ದೇಶದೊಳಕ್ಕೆ ಹರಿಯುತ್ತಿದೆ. ಕಳೆದ ಕೆಲವು ವರ್ಷಗಳಿಂದ ಪಾಕಿಸ್ತಾನವು ಮರು ಪಾವತಿ ಮಾಡಬೇಕಿರುವ ವಿದೇಶಿ ಸಾಲದ ಮೊತ್ತ 13 ಬಿಲಿಯ ಡಾಲರ್‌ಗಳಿಗೆ ತಲುಪಿದೆ.

ಇದು ಪಾಕಿಸ್ತಾನದ ಬಗ್ಗೆ ಸತ್ಯದ ವಾಸ್ತವಿಕ ಚಿತ್ರ. ದಕ್ಷಿಣ ಏಷಿಯಾ ದಲ್ಲಿ ಅಮೇರಿಕದ ಜಾಗತಿಕ ಆಧಿಪತ್ಯ ನೀತಿಯ ಅನುಷ್ಠಾನದಲ್ಲಿ ಪಾಕಿಸ್ತಾನ ಅಮೇರಿಕದ ಉಪಕರಣವಾಗಿ ಪರಿಣಮಿಸಿದೆ ಎಂದು ಒಂದು ಸೋವಿಯೆತ್ ಪತ್ರಿಕೆ ಬರೆದಿದೆ. ○

 REG No. BGW-148 MAG (2) PRB DECR 319/ -78

ಅಭಿನಂದನೆಗಳು


[1ನೇ ಪುಟದಿಂದ]

ಎಲ್ಲಾ ತರದ ಜಾತಿಯ ಮತೀಯ ಶಕ್ತಿಗಳೊಡನೆ ಸೇರಿ,ಅವರ ತಾಳಕ್ಕೆ ಕುಣಿಯುವ ನೀತಿ ದೇಶದ ಜಾತೀಯ ಸೌಹಾರ್ದತೆಗೆ,ಜಾತ್ಯಾತೀತ ನೆಲೆಗಟ್ಟಿಗೆ, ಭಾವೈಕ್ಯತೆಗೆ ಅಪಾಯಕಾರಿಯಾಗಿದೆಂದು ಗೊತ್ತಿದ್ದೂ, ರಾಜಕೀಯ ದುರುದ್ದೇಶದಿಂದ ಅಂಥ ಪಕ್ಷ–ಗುಂಪುಗಳೊಡನೆ ಚೆಲ್ಲಾಟವಾಡುವುದು ಸರಿಯಲ್ಲ. ದೇಶದ ಹಿತದ ದೃಷ್ಟಿಯಿಂದ ನಾವದನ್ನು ಧಿಕ್ಕರಿಸುತ್ತೇವೆಂದು ಹೇಳಿ ಕಾಂಗ್ರೆಸ್ ಮುಖಂಡತ್ವದ ಸಂಯುಕ್ತರಂಗವನ್ನು ಸೋಲಿಸಿ,ಸಿ.ಪಿ.ಐ.[ಎಂ] ಮುಖಂಡತ್ವದ ಎಡ ಪ್ರಜಾಪ್ರಭುತ್ವ ರಂಗವನ್ನು ಅಧಿಕಾರಕ್ಕೆ ತಂದಿದ್ದಾರೆ ಕೇರಳದ ಮತದಾರರು.

ದೇಶದ ರಾಜಕಾರಣದ ಮೇಲೆ ಈ ವಿಜಯ ಹೊಸ ದಿಕ್ಸೂಚಿ ನೀಡಲಿದೆ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಸಹಾಯ ಮಾಡಲಿದೆ. ಕೇರಳ ಪಶ್ಚಿಮ ಬಂಗಾಳದ ವಿಚಾರ ಶೀಲ ಮತದಾರರ ನಿರ್ಣಯವನ್ನು ಸ್ವಾಗತಿಸೋಣ. ಅವರು ತೋರಿಸಿಕೊಟ್ಟ ದಾರಿಯಲ್ಲಿ ನಾವೂಕೂಡ ಕರ್ನಾಟಕದಲ್ಲಿ ಮುಂದುವರಿಯಲು,ಇಲ್ಲಿಯ ರಾಜಕೀಯದಲ್ಲೂ ಬದಲಾವಣೆ ತರಲು ಎಡ ಶಕ್ತಿಗಳನ್ನು ಬೆಳೆಸಲು ಶ್ರಮಿಸುತ್ತೇವೆಂಬುದನ್ನು ತೋರಿಸಿ ಕೊಡೋಣ.

ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಸೂರ್ಯನಾರಾಯಣ್‌ರಾವ್ ಹಾಗೂ ಕಾಂ. ಎನ್.ಕೆ. ಉಪಾಧ್ಯಾಯ ಪತ್ರಿಕಾ ಹೇಳಿಕೆ ನೀಡಿ ಕೇರಳ – ಪಶ್ಚಿಮ ಬಂಗಾಳ ಮತದಾರರನ್ನು ಅಭಿನಂದಿಸಿದ್ದಾರೆ.

ಹುತಾತ್ಮ ಭಗತ್‌ಸಿಂಗ್ ನೆನಕೆಗಳು



(ಲೇಖನ 2ನೇ ಪುಟದಲ್ಲಿ)

23-3-87 ಭಗತ್‌ಸಿಂಗ್ ದಿನಾಚರಣೆಯನ್ನು ಎಸ್. ಎಫ್. ಐ. ಸಹಕಾರದೊಂದಿಗೆ ಡಿ. ವೈ. ಎಫ್ .ಐ. ಮೈಸೂರು ಜಿಲ್ಲಾ ಸಮಿತಿಯಿಂದ ಆಚರಿಸಲಾಯಿತು. ಎಸ್.ಎಫ್.ಐ.ರಾಜ್ಯ ಅಧ್ಯಕ್ಷರಾದ ಕಾ.ಆರ್.ಜಯಕುಮಾರ್ ರವರು ಭಗತ್‌ಸಿಂಗ್ ಸಾಧನೆಗಳ ಬಗ್ಗೆ ಮಾತನಾಡುತ್ತಾ,ಫ್ಯಾಸಿಸ್ಟ್ ಶಕ್ತಿಗಳು ಭಗತ್‌ಸಿಂಗ್‌ರನ್ನು ಅವರ ಧ್ಯೇಯ–ಧೋರಣೆಗಳ ತಪ್ಪು ವಿವರಣೆ ನೀಡುತ್ತಿರುವುದರ ಬಗ್ಗೆ ಯುವ ಜನರು ಮನಗಾಣಬೇಕೆಂದು ವಿವರಿಸಿದರು.

ಭಗತ್‌ಸಿಂಗ್‌ರ ಜೀವನ ಚರಿತ್ರೆ ಮತ್ತು ಸಾಧನೆಯ ಬಗ್ಗೆ ಸಿ.ಐ.ಟಿ.ಯು ಮುಖಂಡರಾದ ಮೋಹನ್ ಕುಮಾರ್ ರವರು ವಿವರಿಸಿದರು.

ಬೆಂಗಳೂರು

23.3.1987 ರಂದು ಬೆಂಗಳೂರಿನಲ್ಲಿ ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್‌ನಲ್ಲಿ ಭಗತ್‌ಸಿಂಗ್‌ರವರ 57ನೇ ವಾರ್ಷಿಕೋತ್ಸವವನ್ನು ಡಿ.ವೈ.ಎಫ್.ಐ. ವತಿಯಿಂದ ಆಚರಿಸಲಾಯಿತು.

ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಂ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ವಕೀಲರ ಸಂಘದ ಕರ್ನಾಟಕ ರಾಜ್ಯ ಮುಖಂಡರಾದ ಕಾ. ಹೆಚ್. ಎನ್. ನಾಗಮೋಹನ್‌ದಾಸ್ ರವರು ಉಪನ್ಯಾಸಕರಾಗಿದ್ದರು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಭಗತ್ ಸಿಂಗ್ ಮತ್ತು ಆತನ ಗೆಳೆಯರ ಧೀರೋದಾತ್ತ ಹೋರಾಟಗಳು, ತ್ಯಾಗ ಬಲಿದಾನಗಳ ವಿಷಯವಾಗಿ ಉಪನ್ಯಾಸ ನೀಡಿದರು. ಮತ್ತೊಬ್ಬ ಎ.ಐ.ಎಲ್ ಯು. ಮುಖಂಡರಾದ ಕಾ. ಶಂಕರಪ್ಪ ಮತ್ತು ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿಗಳಾದ ಕಾ. ಎಸ್.ಆರ್. ಆರಾಧ್ಯರವರುಗಳು ಭಗತ್ ಸಿಂಗ್ ರವರ ಜೀವನ ಚರಿತ್ರೆಯ ವಿಷಯವಾಗಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಕಾ.ಟಿ.ಶಿವಶಂಕರ್ ಸ್ವಾಗತಿಸಿದರು. ಜಿಲ್ಲಾ ಸಹಕಾರ್ಯದರ್ಶಿ ಕಾ.ಗೋಪಾಲಕೃಷ್ಣ ರವರು ವಂದಿಸಿದರು.

ರಶ್ಯನ್ ಚಲನಚಿತ್ರಗಳಿಗೆ ಭಾರಿ ಬೇಡಿಕೆ

ಜಾರ್ಜಿಯಾದ ನಿರ್ದೇಶಕ ತೆಂಗಿಝ್ ಅಬುಲಾಡ್ಜೆ ನಿರ್ದೇಶಿಸಿದ "ರಿಪೆಂಟೆನ್ಸ್" ಚಿತ್ರ ಹಾಗೂ 'ಸೊಲಿಟರಿ ವೊಯೆಜ್' ಎಂಬ ಇನ್ನೊಂದು ಚಿತ್ರವನ್ನು ಅಮೇರಿಕ, ಫ್ರಾನ್ಸ್, ಪ.ಜರ್ಮನಿ, ಹಾಗೂ ಇಟಲಿಯೂ ಒಳಗೊಂಡಂತೆ 40 ರಾಷ್ಟ್ರಗಳು ಖರೀದಿಸಿವೆ.

"ಗೋ ಅಂಡ್ ಸೀ" "ಫ್ಲೈಟ್-222" "ಲೆಟರ್ಸ್ ಫ್ರಮ್ ದಿ ಡೆಡ್ ಮ್ಯಾನ್" ಮುಂತಾದ ಕೆಲವು ಜನಪ್ರಿಯ ಚಿತ್ರಗಳನ್ನು 20 ರಾಷ್ಟ್ರಗಳು ಖರೀದಿಸಿವೆ.

ಅಪಾರ್ಥೀಡ್ ವಿರೋಧಿ ದಿನಾಚರಣೆ

ದಕ್ಷಿಣ ಆಫ್ರಿಕಾದ ಜನರ ಮೇಲೆ ಅಲ್ಲಿಯ ಬಿಳಿಯರ ಸರಕಾರ ನಡೆಸುತ್ತಿರುವ ಅಮಾನುಷ ದಬ್ಬಾಳಿಕೆಯನ್ನು ಖಂಡಿಸಿ, ಆಫ್ರಿಕಾದ ಜನರ ವಿಮೋಚನಾ ಹೋರಾಟಕ್ಕೆ ಬೆಂಬಲ ನೀಡುವ ಸಲುವಾಗಿ 21-3-87ರಂದು ದೇಶಾದ್ಯಂತ ಪ್ರತಿಭಟನಾ ದಿನಾಚರಣೆ ಆಚರಿಸಬೇಕೆಂಬ ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆಯಂತೆ ಬೆಂಗಳೂರಿನ ಚಿಕ್ಕಲಾಲ್‌ಬಾಗಿನಲ್ಲಿ ಸಿ.ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಿ.ಐ.ಟಿ.ಯು ಪರವಾಗಿ ಎಸ್. ಸೂರ್ಯನಾರಾಯಣರಾವ್, ಐ.ಎನ್.ಟಿ.ಯು.ಸಿ ಪರವಾಗಿ ಉಮರಬ್ಬ, ಎಚ್.ಎಂ.ಎಸ್. ಪರವಾಗಿ ಪಿ.ರಾಮದೇವ್, ವಕೀಲ ಸಂಘದ ಪರವಾಗಿ ಗೋಪಾಲ ಗೌಡ ಮೊದಲಾದವರು ಭಾಷಣ ಮಾಡಿದರು. 20ಕ್ಕಿಂತಲೂ ಹೆಚ್ಚು ವಕೀಲರು ಕರಿಕೋಟು ಧರಿಸಿ ಸಭೆಯಲ್ಲಿ ಭಾಗವಹಿಸಿದ್ದು ಒಂದು ವಿಶೇಷ. ಇದರಂತೆಯೇ ಕಳಸ, ಮೂಡಿಗೆರೆ, ಸಕಲೇಶಪುರಗಳಲ್ಲಿ ಮೆರವಣಿಗೆ, ಸಭೆಗಳು ನಡೆದಿವೆ. ವಿರಾಜಪೇಟೆಯಲ್ಲಿ ಕರಪತ್ರ ಹಂಚಲಾಗಿದೆ. ಕೆ.ಜಿ.ಎಫ್‌ನಲ್ಲಿ ಕರಪತ್ರ ಹಂಚಿ ಸಭೆ ನಡೆಸಲಾಗಿದೆ.

ಕೇರಳದಲ್ಲಿ ಎಡ ಪ್ರಜಾಪ್ರಭುತ್ವರಂಗ

(1ನೇ ಪುಟದಿಂದ)

ಸಿದ ಮೈತ್ರಿಯ ತಪ್ಪನ್ನು ಅರಿತುಕೊಳ್ಳದೇ ಹೋಗಿದೆ ಎಂದು ಹೇಳಿದ್ದಾರೆ

ಚುನಾವಣೆಯಲ್ಲಿ ಗೆದ್ದು ಬಂದ ಎಡ ಪ್ರಜಾಪ್ರಭುತ್ವ ರಂಗದ ಜಾತ್ಯಾತೀತ ಶಕ್ತಿಗಳಲ್ಲಿ ಒಗ್ಗೂಡಿ ಸಾಮೂಹಿಕ ಚಳುವಳಿ ನಡೆಸುವುದರ ಮೂಲಕ ಈ ಕೋಮುವಾದಿ ಪ್ರವೃತ್ತಿಯ ವಿರುದ್ಧ ಹೋರಾಡಲಾಗುವುದೆಂದ ಅವರು.

ಕೇರಳದ ಜನತೆಯ ಮನಸ್ಸಿಗೆ ನಾಟಿದ,ಹೃದಯವನ್ನು ಗೆದ್ದ ಬಿರುಗಾಳಿಯಂತೆ ಬಿಡುವಿಲ್ಲದೆ ನಡೆಸಿದ ಚುನಾವಣಾ ಪ್ರಚಾರದಲ್ಲಿ, ಸಭೆಗಳಲ್ಲಿ ಅವರ ಮಾತನ್ನು ಆಲಿಸಿದ ಕೋಟ್ಯಾಂತರ ಮತದಾರರ ಮುಂದೆ ಕಾಂ. ಇ. ಎಂ. ಎಸ್. ಇಟ್ಟ ಸವಾಲು "ನಮ್ಮ ದೇಶಕ್ಕೆ ಜಾತೀಯ ಮತೀಯ ಪಕ್ಷಗಳ ಅಗತ್ಯವಿಲ್ಲ, ಅವುಗಳನ್ನು ವಿಸರ್ಜನೆ ಮಾಡಿ. ಈ ಪಕ್ಷಗಳ ನಾಯಕರು ಹಿಂಬಾಲಕರು ತಮ ತಮಗೆ ತೋರಿದಂತೆ ಯಾವುದಾದರೊಂದು ಜಾತ್ಯಾತೀತ ಪಕ್ಷವನ್ನು ಸೇರಲಿ". ಈ ಈ ಕರೆ ಕೇರಳದ ಎಲ್ಲೆಡೆಯಲ್ಲಿ ಅನುರಣನ ಗೊಂಡಿದೆ. ಜನತೆಯಿಂದ ಪ್ರತಿಸ್ಪಂದನ ಪಡೆದಿದೆ. ಕೇರಳವೊಂದು ಹುಚ್ಚರ ಆಸ್ಪತ್ರೆ ಎಂದು ವಿವೇಕನಂದರು ನೂರು ವರ್ಷಗಳ ಹಿಂದೆ ವರ್ಣಿಸಿದರು. ಆ ಹೆಸರು ಈಗ ಹೋಗಬೇಕಾಗಿದೆ. ಕೇರಳದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಪ್ರತಿಸ್ಪಂದನೆ ಪಡೆಯುತ್ತಿದೆ. ಬಂಡವಾಳಶಾಹಿ ಪತ್ರಿಕಾ ಸಮೂಹವು ಚುನಾವಣೆಗೆ ಮುನ್ನ ಚುನಾವಣೆಯ ನಂತರ ಇದನ್ನು ಒಪ್ಪಲೇಬೇಕಾಗಿ ಬಂದಿದೆ.

ಈಗ ದೇಶದ ಮುಂದೆ ದೇಶದ ಎಲ್ಲಾ ಕಡೆಗಳಲ್ಲಿ ಜಾತೀಯವಾದಿ ಮತೀಯವಾದಿಗಳೊಡನೆ ಟಿ.ಎನ್.ವಿ,ಗೂರ್ಖಾಲ್ಯಾಂಡ್ ಮೊದಲಾದ ವಿಚ್ಛಿದ್ರಕಾರಿಗಳೊಡನೆ ಕೂಡಿಕೊಂಡ ಕಾಂಗ್ರೆಸ್ (ಐ), ಷರಿಯತ್,ಬಾಬರಿ ಮಸೀದಿಗಳ ವಿಷಯದಲ್ಲಿ ಮೀಸಲಾತಿಯ ವಿಷಯದಲ್ಲಿ ಲಾಭ ಪಡೆಯಲೆತ್ನಿಸುವ ಕಾಂಗ್ರೆಸ್ (ಐ) ಒಂದು ಕಡೆ, ಆಗಾಗ್ಗೆ ಖಲಿಸ್ತಾನಿಯರಿಗೆ, ಅವರ ಮಿತ್ರರಾದ ಬಾದಲ್ ಗಣದ ಅಕಾಲಿಗಳಿಗೆ ಬೆಂಬಲ ನೀಡುವ, ಅಸ್ಸಾಂ ಚಳುವಳಿಗಾರರೊಂದಿಗೆ ಸೇರಿಕೊಳ್ಳುವ, ಷರಿಯತ್ ಬಾಬರಿ ಮಸೀದಿಗಳ ವಿಷಯದಲ್ಲಿ ಎಡಬಿಡಂಗಿ ಧೋರಣೆ ಅನುಸರಿಸುವ, ಇವೆಲ್ಲದರಲ್ಲಿ ಸಾಮ್ರಾಜ್ಯಶಾಹಿಗಳ ಕೈವಾಡವನ್ನು ಮನಗಾಣದ, ಕಮ್ಯುನಿಸ್ಟರನ್ನು ಹೊರಗಿಟ್ಟು ಬಿಜೆಪಿಯನ್ನು ಅಪ್ಪಿಕೊಳ್ಳ ಬಯಸುವ ಜನತಾ ಮೊದಲಾದ ಬಂಡವಾಳಶಾಹಿ ಪಕ್ಷಗಳು ಮತ್ತೊಂದು ಕಡೆ. ಇವುಗಳ ಮಧ್ಯೆ ಎಡ ಹಾಗೂ ಜ್ಯಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಪರ್ಯಾಯ ದೇಶದ ಜನತೆಯ ಮುಂದೆ ಕಣ್ಸೆಳೆಕಾಗಿ ಪ್ರಜ್ವಲಿಸುತ್ತಿವೆ. ಕರ್ನಾಟಕದ ರಾಜಕೀಯದ ಮೇಲಂತೂ ಕೇರಳದಲ್ಲಿ ಈ ಪ್ರಮುಖ ಬೆಳವಣಿಗೆ ಪರಿಣಾಮ ಬೀರದೆ ಇರುವುದಿಲ್ಲ.

ದೇಶದ ಐಕ್ಯತೆಗೆ ದುಡಿಯುವ ಜನರ ಹಿತರಕ್ಷಣೆಗೆ ಇದು ಸಿ.ಪಿ.ಐ.(ಎಂ)ನ ಕಾಣಿಕೆ.

ವಿಜಯೋತ್ಸವ ಆಚರಣೆ

ಕೇರಳ-ಪ. ಬಂಗಾಲದ ವಿಧಾನ ಸಭಾ ಚುನಾವಣೆಯ ಫಲಿತಾಂಶಗಳು ಪ್ರಕಟವಾಗುತ್ತಿದ್ದಂತೆಯೇ ಎಡ ಪ್ರಜಾಪ್ರಭುತ್ವರಂಗ ಮತ್ತು ಎಡರಂಗದ ವಿಜಯದತ್ತ ಮುನ್ನುಗ್ಗುತ್ತಿರುವುದರಿಂದ ಹರ್ಷಗೊಂಡ ಸಿ.ಪಿ.ಐ.(ಎಂ) ಪಕ್ಷದ ಕಾರ್ಯಕರ್ತರೂ,ಬೆಂಬಲಿಗರೂ, ಸುಲ್ತಾನ ಪೇಟೆ, ಶ್ರೀರಾಮಪುರ, ಕೆ.ಆರ್.ಪುರ, ಯಶವಂತಪುರಗಳಲ್ಲಿ 24–25ರಂದು ವಿಜಯೋತ್ಸವ ಆಚರಿಸಿದರು. ಯಶವಂತಪುರದಲ್ಲಿ ಎನ್.ಕೆ. ಉಪಾಧ್ಯಾಯ ಮತ್ತು ಎಸ್. ಆರ್. ಆರಾಧ್ಯ ಚುನಾವಣೆಯ ಮಹತ್ವ ತಿಳಿಸಿ ಹೇಳಿ ಕರ್ನಾಟಕದಲ್ಲಿಯೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಲು ತುರ್ತು ಕಾರ್ಯಕ್ರಮ ಹಮ್ಮಿಕೊಳ್ಳುವ ಮಹತ್ವತಿಳಿಸಿ ಹೇಳಿದರು.

ಈ ವಾರ....

ಪಶ್ಚಿಮ ಬಂಗಾಳದಲ್ಲಿ ಗಂಭೀರ ರಾಜಕೀಯ ಗದ್ದಿದೆ. ಕೇರಳದಲ್ಲಿ ಸಕಂಚಿತವಾದ-ವಿರೋಧೀ ರಾಜಕೀಯ ಯಶಸ್ವಿಯಾಗಿದೆ.

–ದೂರದರ್ಶನದಲ್ಲಿ ಶ್ರೀಪ್ರಾಣ ಚೋಪ್ರಾರವರ ವಿಮರ್ಶೆ

ತ್ರಿಪುರಾ ರಾಜ್ಯ ಸರ್ಕಾರ ಕಳೆದ ಒಂದು ವರ್ಷದಲ್ಲಿ ಚಕ್ಮಾ ನಿರಾಶ್ರಿತರಿಗಾಗಿ ತನ್ನ ಸಂಪನ್ಮೂಲದ ಮಿತಿಯೊಳಗೆ ಗರಿಷ್ಟ ಮಟ್ಟದವರೆಗೆ [200 ಕೋಟಿ ರೂ.] ಖರ್ಚುಮಾಡಬೇಕಾಯಿತು. ಬಹುಶಃ ಕೇಂದ್ರ ಸರ್ಕಾರ ಯಥಾಪ್ರಕಾರ ಈ ನಿರಾಶ್ರಿತರು ಶಾಂತಿಯುತವಾಗಿ ವ್ಯವಸ್ಥಿತವಾಗಿ ಮರಳಲು ತಕ್ಕ ಕ್ರಮಕೈಗೊಳ್ಳಲು ಪರಿಸ್ಥಿತಿ ಗಂಭೀರ ಮಟ್ಟ ತಲುಪುವವರೆ ಕಾಯಬೇಕೆಂದಿದೆಯೋ ಏನೋ!

–ಫ್ರೀ ಪ್ರೆಸ್ ಜನರಲ್, ಮಾ.25

ಕೇಂದ್ರ ಹಣಕಾಸಿನ ಇಲಾಖೆ ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ದಾಖಲಾತಿ 1986ರ ಅತ್ಯಂತ ವೇಳೆಗೆ 3 ಕೋಟಿ ತಲುಪಿದೆ. ಇದರ ಪ್ರಕಾರ ಒಂದು ವರ್ಷದಲ್ಲಿ ನಿರುದ್ಯೋಗ 14.2% ದಷ್ಟು ತೀವ್ರವಾಗಿ ಹೆಚ್ಚಿದೆ.

–ಡೆಕ್ಕನ್ ಹೆರಾಲ್ಡ್, ಮಾ26

ಈ ವಿಧಾನ ಸಭಾ ಚುನಾವಣೆಗಳು ರಾಜೀವ್‌ಗಾಂಧಿ ಅವರ ವರ್ಚಸ್ಸು ಮತ್ತು ವೋಟು ಆಕರ್ಷಕ ಶಕ್ತಿಗೆ ಒಂದು ಕಿರು ಪರೀಕ್ಷೆಯಂತಾಗಿದ್ದವು. ಚುನಾವಣೆಗೆ ಹೋಗಲಿದ್ದ ರಾಜ್ಯಗಳಲ್ಲಿ ಅವರು ಕೈಗೊಂಡ ಜನ ಸಂಪರ್ಕ ಪ್ರಚಾರ, ಅಲ್ಲಿ ಪ್ರಕಟಿಸಿದ ನೂರಾರು ಕೋಟಿ ರೂಗಳ ನೆರವು ಮುಂತಾದ ಯಾವುದೇ ವಿಧಾನಗಳೂ ಕಾಂಗ್ರೆಸ್ ಪರ ಮತಗಳಾಗಿ ಪರಿವರ್ತನೆ ಗೊಳ್ಳಲು ಶಕ್ಯವಾಗಿಲ್ಲ.

—ಪ್ರಜಾವಾಣಿ

ಜನವರಿ 87ರ ಅಂತ್ಯದ ವೇಳೆಗೆ 74ರೋಗಗ್ರಸ್ತ ಬಟ್ಟೆ ಗಿರಣಿಗಳು ಮುಚ್ಚಲ್ಪಟ್ಟಿದ್ದವು. 91730 ಕಾರ್ಮಿಕರು ತೊಂದರೆಗೊಳಗಾಗಿದ್ದಾರೆ.

—ಲೋಕ ಸಭೆಯಲ್ಲಿ ಜವಳಿಮಂತ್ರಿ ಹೇಳಿಕೆ, ಮಾ.20

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone : 75331
Editor P. Ramachandra Rao
Managing Editor : N.K. Upadhyaya